3. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗಟ್ಟಿ ಚಂದ್ರಶೇಖರ್ ಅವರು ದಿನಾಂಕ 1.9.97ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರು ಹಾಗೂ ವ್ಯಾಪಾರಸ್ಥರು ಆಗಿದ್ದ ಶ್ರೀಯುತರು ಸಿದ್ದಗಂಗಾ ತಾಂತ್ರಿಕ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಹೋಂಗಾರ್ಡ್ ಸದಸ್ಯರು ಹಾಗೂ ನಿಯಂತ್ರಣಾಧಿಕಾರಿಯಾಗಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವುದರ ಜೊತೆಗೆ1972-83ರ ಅವಧಿಯಲ್ಲಿ ಗುಬ್ಬಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

4. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಜಿ. ವೃಷಬೇಂದ್ರಪ್ಪನವರು ದಿನಾಂಕ 18.8.97ರಂದು ನಿಧನರಾದರು. ಶ್ರೀಯುತರು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್ ಪರಶುರಾಂಪುರ ಹೋಬಳಿ ಕೊರ್ಲಕುಂಟೆ ಗ್ರಾಮದಲ್ಲಿ ಜನಿಸಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದ ಶ್ರೀಯುತರು 1941-45ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಚಳ್ಳಕೆರೆ ತಾಲ್ಲೂಕನ್ನು ಪ್ರತಿನಿಧಿಸಿದ್ದರು.

ಮೃತರಾದ ಸದಸ್ಯರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ವಿತ್ತೀಯ ಕಾರ್ಯಕಲಾಪ ತೆಗೆದುಕೊಳ್ಳೋಣ. ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ತಾವು ಅದನ್ನು ನಿಯಮ 60ರ ಕೆಳಗೆ ಕೊಟ್ಟಿದ್ದೀರಿ ಅದನ್ನು ಪ್ರಸ್ತಾಪ ಮಾಡುತ್ತೀರೋ?

ನಿಲುವಳಿ ಸೂಚನೆ
(ಮಂಡನೆಗೆ ಅನುಮತಿ ಕೋರಿಕೆ)

ಹಾಸನ ಜಿಲ್ಲಾ ಹೇಮಾವತಿ ಮಹಿಳಾ ಸರ್ಕಾರಿ ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಉಂಟಾದ ಗಲಭೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಹೇಮಾವತಿ ಮಹಿಳಾ ಸಹಕಾರಿ ಬ್ಯಾಂಕ್‌ನ ಪ್ರಥಮ ಸರ್ವ ಸದಸ್ಯರ ಸಭೆ 30ನೇ ತಾರೀಖು ಹಾಸನ ಜಿಲ್ಲೆಯಲ್ಲಿ ಕರೆಯಲಾಗಿತ್ತು. ಆದರೆ ತಮಗೆ ಗೊತ್ತಿದೆ, ಹೇಮಾವತಿ ಮಹಿಳಾ ಸಹಕಾರಿ ಬ್ಯಾಂಕ್, ಈ ಒಂದು ಸಹಕಾರಿ ಬ್ಯಾಂಕ್‌ನ ಪ್ರಥಮ ಸರ್ವ ಸದಸ್ಯರ ಸಭೆ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಕರೆಯಲಾಗಿತ್ತು. ಆದರೆ ಏಕೋ ಪ್ರಾರಂಭದಿಂದಲೇ ಇದಕ್ಕೆ ಗ್ರಹ ಬಡಿದಿದೆ. ಪ್ರಥಮದಲ್ಲಿ ಈ

ಮಹಿಳಾ ಬ್ಯಾಂಕ್‌ನ್ನು ರಿಜಿಸ್ಟರ್ ಮಾಡಬಾರದು ಎಂದು ಹೇಳಿ ಸರ್ಕಾರದವರು ಹಠ ಹಿಡಿದು ಅನೇಕ ತೊಂದರೆಗಳನ್ನು ಕೊಟ್ಟರೂ ಕೊನೆಗೆ ಇದೇ ಸಭೆಯಲ್ಲಿ ಮಾನ್ಯ ಎ.ಟಿ. ರಾಮಸ್ವಾಮಿಯವರು, ಮಾನ್ಯ ಶಿವರಾಂರವರು, ಎಲ್ಲರೂ ಕೂಡ ಗಲಾಟೆ ಮಾಡಿದಮೇಲೆ, ಕಾನೂನು ರೀತಿಯಾಗಿ ತಾವು ಈ ಸಹಕಾರಿ ಬ್ಯಾಂಕ್‌ಗೆ ರಿಜಿಸ್ಟರ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಕೇಳಿಕೊಂಡಾಗ ಸುಮಾರು ತಿಂಗಳು ಕಳೆದ ಮೇಲೆ ಕೊನೆಗೆ ಒಂದು ಪರಿಹಾರವನ್ನು ಕಂಡು ಹಿಡಿದು ಇದಕ್ಕೆ 2-3ಸಲಿ ಇಲ್ಲಿ ಪ್ರತಿಪಾದನೆ ಮಾಡಿದಮೇಲೆ ರಿಜಿಸ್ಟರ್ ಮಾಡಬೇಕೆನ್ನುವ ಅಂತಿಮ ತೀರ್ಮಾನ ಆಯಿತು. ಅದು ರಿಜಿಸ್ಟರ್ ಆಯಿತು. ರಿಜಿಸ್ಟರ್ ಆದಮೇಲೆ ಇದು ಯಾವುದೇ ರೀತಿಯಿಂದ ಈ ಬ್ಯಾಂಕ್‌ನ್ನು ಮುಂದೆ ರಿಸರ್ವ್ ಬ್ಯಾಂಕ್‌ಗೆ ಕಳುಹಿಸಬಾರದು ಮತ್ತು ಈ ಒಂದು ಮಹಿಳಾ ಕೋ-ಅಪರೇಟೀವ್ ಬ್ಯಾಂಕ್‌ನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಸ್ಥಳೀಯ ಮುಖಂಡರು ತಮ್ಮ ಪ್ರಭಾವವನ್ನು ಬೀರಿ ಸುಮಾರು 400-500 ಜನರನ್ನು ಬೇನಾಮಿ ಸದಸ್ಯರನ್ನು ಮಾಡಿಸಿ ಇದರಲ್ಲಿ ಇಂಟರ್‌ಫಿಯರ್ ಮಾಡತಕ್ಕಂಥ ಸತತ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಇಲ್ಲಿ ಸದನದಲ್ಲಿ ಬಂದಾಗ ನೀವು ಇನ್‌ಚಾರ್ಜ್ ಮಂತ್ರಿಗಳಾಗಿದ್ದೀರಿ. ಇಂತಹ ಸಣ್ಣ ಪುಟ್ಟ ಕೆಲಸಕ್ಕೆ ಕೈ ಹಾಕಬಾರದು ಎಂದು ಹೇಳಿ ಆಗ ಕೂಡ ಕೇಳಿಕೊಂಡಾಗ ಅವರು ಇದಕ್ಕೆ ನಾನು ಯಾವುದೇ ರೀತಿಯಿಂದ ಕೈ ಹಾಕಿಲ್ಲ, ಸಂಬಂಧ ಇಲ್ಲ ಎಂದು ಹೇಳಿದರು. ಆದರೆ ಅಧ್ಯಕ್ಷರೇ, ತಮಗೂ ಕೂಡ ಈ ಫೋಟೋಗಳನ್ನು ಕಳುಹಿಸಿಕೊಡುತ್ತೇನೆ ಮತ್ತು ಅಲ್ಲಿ ಮಹಿಳಾ ಸದಸ್ಯರು ಕೂಡ ತಮ್ಮನ್ನು ಭೇಟಿ ಆಗಿರಬಹುದು, ಸಹಕಾರ ಸಚಿವರನ್ನು ಭೇಟಿ ಆಗಿದ್ದರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರಿಗೆ ಭೇಟಿಯಾಗಿದ್ದಾರೆ. ಅನೇಕ ವಿರೋಧಪಕ್ಷದಲ್ಲಿ ಇರತಕ್ಕಂಥ ಸದಸ್ಯರಿಗೆ ಮತ್ತು ಆ ಕಡೆ ಇರತಕ್ಕಂಥ ಮಂತ್ರಿಗಳಿಗೆ ಶಾಸಕರಿಗೆ ಎಲ್ಲರಿಗೂ ಕೂಡ ಭೇಟಿ ಆಗಿದ್ದಾರೆ. ಅವರು ಕಷ್ಟಪಟ್ಟು ಪಾಪ ಅವರು ಮಾಡಿದಂತಹ ಕೆಲಸದ ಬಗ್ಗೆ ಸವಿಸ್ತಾರವಾಗಿ ಮಾಹಿತಿಯನ್ನು ಕೊಟ್ಟಿದ್ದಾರೆ. ನನಗೆ ಅನ್ನಿಸಿದಮಟ್ಟಿಗೆ ಅನೇಕ ಜಿಲ್ಲೆಗಳಲ್ಲಿ ಎಲ್ಲೂ ಕೂಡ ಇಂತಹ ಒಂದು ಪ್ರಶ್ನೆ ಉದ್ಭವಿಸಿಲ್ಲ. ಹಾಸನ ಜಿಲ್ಲೆಯಲ್ಲಿ ಏಕೆ ಈ ರೀತಿಯಾಗುತ್ತಿದೆ? ಕಾನೂನು ರೀತಿಯಿಂದ ಏಕೆ ಅಲ್ಲಿ ಸಂಘಸಂಸ್ಥೆಗಳು ನಡೆಯುತ್ತಿಲ್ಲ. ಇವತ್ತು ಇದು ಒಂದು ದೊಡ್ಡ ಪ್ರಶ್ನೆಯಾಗಿದೆ. ಯಾವುದಾದರೂ ಹೇಳುವುದಕ್ಕೆ ಹೋದರೆ ರಾಜಕೀಯ ತರುತ್ತಾರೆ, ಅಥವಾ ನಿಮ್ಮ ಕಾಲದಲ್ಲಿ ಏನಾಯಿತು? ಎನ್ನುತ್ತಾರೆ. ಇದು ಏನಾಗಿದೆಯೆಂದರೆ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮಾತನಾಡುವಾಗ ಹೇಳುತ್ತೇನೆ, ನಾವು ಯಾವಾಗಲೂ ಕೆಲಸ ಮಾಡುವಾಗ ಈ ಒಂದು ಇಲಾಖೆ ಇದೆ, ಈ ಇಲಾಖೆಯಲ್ಲಿ ಒಂದು ಕಾನೂನು ಇದೆ. ಆ ಕಾನೂನಿನ ಪ್ರಕಾರ ನಾನು ಹೋಗಬೇಕು. ಏನೋ ಒಂದು ಬಾರಿ ತಡೆ ಹಿಡಿದಿರಿ. ನಂತರ ಒತ್ತಾಯ ಬಂತು ಕೊನೆಗೆ ಅದು ರಿಜಿಸ್ಟರ್ ಆಯಿತು. ಮುಂದಿನ ಕೆಲಸವಾದರೂ ಸುಲಭವಾಗಿ ಜರುಗಬೇಕಲ್ಲ. ಆದರೆ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದಿದ್ದಕ್ಕೆ 144 ಸೆಕ್ಷನ್ ಹಾಕಿ ನೂರಾರು ಪೊಲೀಸರು ಇದ್ದರು. ಅಲ್ಲಿ ಬಹುಶಃ ನೀವು ಫೋಟೋ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಅಷ್ಟೊಂದು ಜನ ಪೋಲೀಸರು ಆ ಜನರಲ್ ಬಾಡಿ ಮೀಟಿಂಗ್‌ಗೆ ಬೇಕಾಗಿತ್ತಾ? ಹೆಣ್ಣುಮಕ್ಕಳು ಏನು ಅಲ್ಲಿ ಜೀವ ಕಳೆದುಕೊಳ್ಳುವವರು ಇದ್ದರಾ? ಅಥವಾ ಅಲ್ಲಿ ಏನಾದರೂ ಒಂದು ದೊಡ್ಡದಾಗಿ ನಡೆಯದೆ ಇರತಕ್ಕಂಥ ಅನಾಹುತ ನಡೆದಿತ್ತೇ? ಯಾವ ಕಾರಣಕೋಸ್ಕರ ಅಲ್ಲಿ 144 ಸೆಕ್ಷನ್ ಜಾರಿಯಲ್ಲಿ ಮಾಡಿ, ಅಲ್ಲಿ ಅಷ್ಟೊಂದು ಪೊಲೀಸರನ್ನು

ಹಾಕಿದಿರಿ. ಚಿಂತಾಮಣಿಯಲ್ಲಿ ಪೊಲೀಸ್ ಫೋರ್ಸ್ ಇಲ್ಲದಿದ್ದಾಗ ಅಥವಾ ಇದ್ದಂತಹ ಪೊಲೀಸರಿಗೆ ಪಾಪ ಜನರು ರೊಚ್ಚಿಗೆದ್ದು ಅವರೇ ಕಲ್ಲು ತೂರಾಟ ಮಾಡಿದಾಗ ಮೂರು ಜನ ಸತ್ತರು. ಆದರೆ ಇಲ್ಲಿ ಮಹಿಳೆಯರ ಸಹಕಾರಿ ಬ್ಯಾಂಕ್ ಇದೆ, ಜನರಲ್ ಬಾಡಿ ಮೀಟಿಂಗ್‌ನಲ್ಲಿ ನೂರಾರು ಪೊಲೀಸರು ಹೋಗುತ್ತಾರೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಪೊಲೀಸರು ಹೋಗುವುದಿಲ್ಲ. ಎಲ್ಲಿ ಅವಶ್ಯಕತೆ ಇಲ್ಲ, ಎಲ್ಲಿ ಮಹಿಳೆಯರು ಸಭೆ ನಡೆಸುತ್ತಾರೆ, ಆ ಮಹಿಳೆಯರ ಸಭೆಗೆ ಪೊಲೀಸರನ್ನು ಕಳುಹಿಸಿ ದಬ್ಬಾಳಿಕೆ ಮಾಡತಕ್ಕಂಥಾದ್ದು, ಅನ್ಯಾಯ ಮಾಡತಕ್ಕಂಥಾದ್ದು ಆಗುತ್ತದೆ. ನಾವು ಏನು ಹೇಳುತ್ತೇವೆ ಹಾಗೆಯೇ ನಡೆಯಬೇಕು ಮತ್ತು ನಮ್ಮ ಮಾತೇ ಈ ಜಿಲ್ಲೆಯಲ್ಲಿ ನಡೆಯಬೇಕು ಎನ್ನುವ ಹಾಗಿದ್ದರೆ ಕಾನೂನು ಏಕೆ ಬೇಕು ಮಾನ್ಯ ಅಧ್ಯಕ್ಷರೇ? ಇಲ್ಲದೆ ಇದ್ದರೆ ಒಬ್ಬೊಬ್ಬರಿಗೆ ಒಂದೊಂದು ಜಾಗೀರು ಬರೆದು ಕೊಡಿ. ಯಾರು ಉಸ್ತುವಾರಿ ಸಚಿವರು ಇರುತ್ತಾರೆ, ಈಗ ಹಾಸನ ಉಸ್ತುವಾರಿ ಸಚಿವರು ಯಾರು? ಅವರಿಗೆ ಹಾಸನ ಜಾಗೀರು, ಯಾರಿಗೂ ಇಂಟರ್‌ಫಿಯರೆನ್ಸ್ ಬೇಡ. ಆ ಸಹಕಾರಿ ಕ್ಷೇತ್ರದಲ್ಲಿ ಬೇಡ. ಪೊಲೀಸರಲ್ಲಿ ಬೇಡ. ರೆವಿನ್ಯೂ ಇಲಾಖೆಯಲ್ಲಿ ಬೇಡ. ಬಿ.ಡಿ.ಎ. ಅಥಾರಿಟೀಸ್ ಇರುತ್ತಾರಲ್ಲ, ಅದೇರೀತಿಯಾಗಿ ಅಂತಹ ಹೌಸಿಂಗ್ ಡೆವಲಪ್‌ಮೆಂಟ್ ಮಾಡತಕ್ಕಂಥ ಎಲ್ಲಾದಕ್ಕೂ ಕೂಡ ಯಾರನ್ನು ಇಂಟರ್‌ಫಿಯರ್ ಮಾಡಬೇಡಿ. ಅವರಿಗೆ ಹೇಳಿ ಇಂತಹ ತಾಲ್ಲೂಕು ಜಾಗೀರು ಇದೆ, ಅಥವಾ ಜಿಲ್ಲೆ ಜಾಗೀರು ಇದೆ, ಆ ಜಾಗೀರಿನಲ್ಲಿ ನೀವು ಏನು ಮಾಡಬೇಕೆಂದರೂ ನಾವು ಕೇಳುವುದಿಲ್ಲ ಎಂದು. ನಾವು ಕಾದು ನೋಡೋಣ, ಮುಂದೆ ಯಾವಾಗ ಪ್ರಜಾತಂತ್ರ ಈ ದೇಶದಲ್ಲಿ ಬರುತ್ತದೋ ಅಥವಾ ನಮ್ಮ ರಾಜ್ಯದಲ್ಲಿ ಅದು ಪುನರ್ ಸ್ಥಾಪನೆ ಆಗುತ್ತದೋ ಆಗ ಬೇಕಾದರೆ ಅದರ ಬಗ್ಗೆ ಮಾತನಾಡೋಣ. ಅವರು ಅಲ್ಲಿ ಹತ್ತಾರು ಲಕ್ಷ ರೂಪಾಯಿ ಕಲೆಕ್ಟ್ ಮಾಡಿ ಇವತ್ತು ಒಂದು ಮೀಟಿಂಗ್ ಕರೆದರೆ ಆ ಮೀಟಿಂಗ್ ಮಾಡಿಸಬಾರದು ಎಂದು ಹೇಳಿ ತಾವು ಹಠ ಹಿಡಿದರೆ ಇದು ಯಾವ ನ್ಯಾಯ? ಮಾನ್ಯ ಅಧ್ಯಕ್ಷರೆ, ಸುಮಾರು 100 ಸಾವಿರ ಜನರಿಗೆ ಅಲ್ಲಿ ಅಡಿಗೆ ವ್ಯವಸ್ಥೆ ಮಾಡಿದರೆ ಆ ಅಡಿಗೆಯನ್ನು ಕೂಡ ಚೆಲ್ಲಾಪಿಲ್ಲಿ ಮಾಡಿಸಿ ಅಲ್ಲಿಂದ ಜನರಿಗೆ ಹೊಡೆದು ಓಡಿಸಿ ಕಲ್ಯಾಣಮಂಟಪದ ಹೊರಗೆ ಲಾಕ್ ಮಾಡಿಸಿದ್ದಾರೆ. ಸುಮಾರು 18 ಲಕ್ಷ ರೂಪಾಯಿಗಳನ್ನು ಹೆಣ್ಣುಮಕ್ಕಳೆಲ್ಲಾ ಸೇರಿ ಕೂಡಿಸಿದ್ದಾರೆ. ಹೆಣ್ಣುಮಕ್ಕಳ ಮೇಲೆ ಅನುಕಂಪ ತೋರಿಸಬೇಕು. ಇಲ್ಲ ನಿಮಗೆ ಇನ್ನೊಂದು ಬ್ಯಾಂಕ್ ಮಾಡಬೇಕಾಗಿದ್ದರೆ ಕೆಲವು ಜಿಲ್ಲೆಯಲ್ಲಿ ಎರಡೆರೆಡು ಮಹಿಳಾ ಬ್ಯಾಂಕ್ ಮಾಡಿದ್ದಾರೆ. ನಿಮಗೆ ಇನ್ನೊಂದು ಮಾಡಿಕೊಡಬೇಕಾದರೆ ಇನ್ನು ಹೆಚ್ಚಿಗೆ 20 ಲಕ್ಷ ರೂಪಾಯಿ ಸೇರಿಸಿ ಬೇರೆ ಬ್ಯಾಂಕ್ ಮಾಡಿ. ಆದರೆ ಇದೇ ಬ್ಯಾಂಕ್ ಬೇಕು, ಇದರಲ್ಲಿ ನೀವು ಬರಬೇಕು, ಇದರಲ್ಲಿ ನಿಮ್ಮ ಬೇನಾಮಿ ಸದಸ್ಯರು ಇರಬೇಕು, ಇದನ್ನು ಮಾಡಿದ್ದನ್ನು ಕೆಡಿಸಬೇಕು, ಎನ್ನುವ ಅಟ್ಟಹಾಸ ನಿಮಗೆ ಏಕೆ ಇದೆ. ಎಂದರೆ ಇದರ ಅರ್ಥ ಏನು? ಎಂದರೆ ನೀವು ಮಾಡುವ ಹಾಗೆ ಇಲ್ಲ. ಬೇರೆಯವರು ಮಾಡಿದರೆ ಸಹಿಸುವ ಹಾಗೆ ಇಲ್ಲ. ಅಥವಾ ಬೇರೆಯವರು ಮಾಡಿದರು ಎಂದರೆ ಅವರಿಗೆ ಸಹಾಯ ಮಾಡುವುದಿಲ್ಲ. ಎಂದರೆ ಇದು ಒಂದು ಸರ್ಕಾರ ಎಂದು ಹೇಳಬೇಕೇ? ಇದು ಡಿಕ್ಟೇಟರ್‌ಶಿಫ್ ಎಂದು ಹೇಳಬೇಕೇ? ಈ ರೀತಿಯಾಗಿ ನಡೆದುಕೊಂಡರೆ ಯಾರಿಗೂ ಕೂಡ ಗೌರವವನ್ನು ತಂದುಕೊಡುವುದಿಲ್ಲ. ನಿಮಗೆ ಸಹಾಯ ಮಾಡಬೇಕು, ಸಂಘಸಂಸ್ಥೆಗಳನ್ನು ಕಟ್ಟಬೇಕು ಎಂಬ ಆಸೆಯಿದ್ದರೆ ನೀವು ಹಣವನ್ನು ಕಲೆಕ್ಟ್ ಮಾಡಿ, ಜನರನ್ನು ಕೂಡಿಸಿ ಹೊಸ ಸದಸ್ಯತ್ವವನ್ನು ಮಾಡಿ ಒಂದಿಲ್ಲದಿದ್ದರೆ ಎರಡು ಬ್ಯಾಂಕ್‌ಗಳನ್ನು

ಮಾಡಿ. ಚಿತ್ರದುರ್ಗದಲ್ಲಿ 2 ಬ್ಯಾಂಕ್ ಇದೆ, ಬಿಜಾಪುರದಲ್ಲಿ 2 ಬ್ಯಾಂಕ್ ಇದೆ, ಬೀದರ್‌ನಲ್ಲಿ ಬ್ಯಾಂಕ್ 2 ಆಗಿದೆ, ಎಷ್ಟೋ ಕಡೆ ಎರಡೂ ಮೂರು ಬ್ಯಾಂಕುಗಳು ಇಲ್ಲ. ಬೇರೆ ಎಲ್ಲಾ ಕಡೆ ಇದೆ ಇಲ್ಲಿ ಏಕೆ ಈ ತರಹದ ಪ್ರಶ್ನೆ ಬರುತ್ತಿದೆ ಅಂದರೆ ಬೇರೆಯವರು ಸಂಘಟನೆ ಮಾಡಿದ್ದಕ್ಕೆ ನಮ್ಮ ಕಡೆ ಒಂದು ಮಾತನ್ನು ಹೇಳುತ್ತಾರೆ, ಹುತ್ತದಲ್ಲಿ ಹಾವು ಬಂದು ಸೇರಿಕೊಂಡ ಹಾಗೆ. ಯಾರೋ ಕಟ್ಟುವುದು, ಇವರು ಬಂದು ಅಧಿಕಾರದಲ್ಲಿದ್ದಾಗ ಯಾವ ರೀತಿ ಆಗುತ್ತಿದೆ ಎಂಬುದನ್ನು ನೋಡುವುದಾದರೆ, ನೀವು ಕೋ-ಆಪರೇಟೀವ್ ಮೂವ್‌ಮೆಂಟ್‌ಗೆ ಸಪೋರ್ಟ್ ಮಾಡಿದಂತೆ ಕಾಣುತ್ತಿಲ್ಲ. ನಿಮ್ಮ ಪ್ರೋತ್ಸಾಹದಿಂದಲೇ ಅವರು ಈ ರೀತಿ ಮಾಡುತ್ತಾ ಇರುವುದು. ನೀವು ಮನಸ್ಸು ಮಾಡಿದರೆ ಕಾನೂನಿನ ಪ್ರಕಾರವಾಗಿ ಮಾತನ್ನು ಕೊಟ್ಟಿದ್ದೇವೆ, ರಿಜಿಸ್ಟ್ರೇಷನ್ ಮಾಡಿದ್ದರೆ ಇದನ್ನು ರಿಸರ್ವ್ ಬ್ಯಾಂಕ್‌ಗೆ ಕಳುಹಿಸೋಣ ಅಪ್ರೂವಲ್ ಆಗಿ ಬರಲಿ. ಈ ಬ್ಯಾಂಕ್ ನಡೆಯಲಿ, ನಿಮಗೆ ಬೇಕಾದರೆ ಇನ್ನೊಂದು ಮಾಡಿಕೊಡುತ್ತೇವೆಂದು ಅವರಿಗೆ ತಾವು ಹೇಳಬಹುದಾಗಿತ್ತು. ಅದನ್ನು ಹೇಳುವುದನ್ನು ಬಿಟ್ಟು ಡೆಪ್ಯುಟಿ ರಿಜಿಸ್ಟ್ರಾರ್‌ಗೆ ಕುಮ್ಮಕ್ಕು ಕೊಡುವುದು, ಜಾಯಿಂಟ್ ರಿಜಿಸ್ಟ್ರಾರ್‌ರವರಿಗೆ ಕುಮ್ಮಕ್ಕು ಕೊಡುವುದು ಅಂದರೆ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಾರೆಂದು ಹೇಳಿ ಅವರನ್ನು ನೀವು ಬಳಸಿಕೊಂಡರೆ ಕೊನೆಗೆ ಬಲಿಪಶುವಾಗುವವರು ಯಾರು ಎಂದರೆ ಅಧಿಕಾರಿಗಳು. ನಾವೆಲ್ಲರೂ ಏನು ಮಾಡುತ್ತೇವೆಂದರೆ ಸಸ್ಪೆಂಡ್‌ಮಾಡತಕ್ಕಂಥದ್ದು, ಆ್ಯಕ್ಷನ್ ತೆಗೆದುಕೊಳ್ಳತಕ್ಕಥದ್ದು ಅಥವಾ ಇಲ್ಲೀಗಲ್ ಆ್ಯಕ್ಷನ್ ಇದೆ ಎಂದರೆ ಅಧಿಕಾರಿಗಳು ಮಾಡಿದ್ದು ಎಂದು ಹೇಳುತ್ತಾರೆ. ತಾವು ಸಸ್ಪೆಂಡ್ ಯಾರನ್ನು ಮಾಡುತ್ತೀರಿ ಎಂದರೆ ಕೆಳಗಿನ ಅಧಿಕಾರಿಗಳನ್ನು ಅದಕ್ಕೆ ಹೊರತಾಗಿ ಮೌಖಿಕವಾಗಿ ನೀವು ಮಾಡಿದಂತಹ ಆರ್ಡರ್ ಕೂಡ ಯಾರ ಗಮನಕ್ಕೂ ಬರುವುದಿಲ್ಲ. ನೀವು ಒತ್ತಡ ತಂದಿದ್ದರೂ ಕೂಡ ಯಾರ ಗಮನಕ್ಕೂ ಕೂಡ ಬರುವುದಿಲ್ಲ. ಇವತ್ತು ಟ್ರಾನ್ಸ್‌ಫರ್ ಆಗುತ್ತದೆಂದು ತಿಳಿದುಕೊಂಡು ಏನು ನಮಗೆ ಸಹಾಯ ಮಾಡಿದ್ದಾರೆಂದು ಹೇಳಿ ಆ ಒಂದು ದೃಷ್ಟಿಯಿಂದ ನಿಮ್ಮ ಮಾತುಗಳನ್ನು ಕೇಳಿಕೊಂಡು ಅವರು ನಡೆಸಿಕೊಂಡು ಬಂದರೆ ಈ ರೀತಿಯಾಗಿ ಶೋಷಣೆ ನಡೆದರೆ ನಿಮ್ಮ ಆಡಳಿತದಲ್ಲಿ ರೂಲ್ ಆಫ್ ಲಾ ಇದೆ ಏನು? ಎಂದು ಕೇಳಬೇಕಾಗುತ್ತದೆ ಅದು ಕಾನೂನು ಪ್ರಕಾರವಾಗಿ ನಡೆದುಕೊಂಡು ಹೋಗಿರತಕ್ಕಂತಹ ಜಿಲ್ಲೆ ಏನೂ ಅಲ್ಲ. ಅದಕ್ಕಾಗಿ ನಿನ್ನೆ ದಿವಸ ಮಾನ್ಯ ನಂಜೇಗಾಡರು ಸಜೆಸ್ಟ್ ಮಾಡಿದರು. ಈ ಜಿಲ್ಲಾ ಉಸ್ತುವಾರಿ ಸಚಿವರನ್ನು ಚೇಂಜ್ ಮಾಡಿ ಎಂದು. ಏಕೆಂದರೆ ಆ ಜಿಲ್ಲೆಯಲ್ಲೇ ಅವರು ಇರುವುದರಿಂದ ಅವರಿಗೆ ವೆಸ್ಟೆಡ್ ಇಂಟರೆಸ್ಟ್ ಡೆವಲಪ್ ಆಗುತ್ತದೆ. ಹಿಂದೆ ಈ ರೀತಿಯಾಗಿ ಶ್ರೀ ದೇವರಾಜ್‌ಅರಸರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಶ್ರೀ ಗುಂಡುರಾವ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿತ್ತು. ಮತ್ತೇ ರೀಸೆಂಟ್ ಆಗಿ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿಯೂ ಕೂಡ ಅನೇಕ ಸಾರಿ ಬದಲಾವಣೆಯಾಯಿತು. ನಾನು ಏಕೆ ಹೇಳುತ್ತಿದ್ದೇನೆಂದರೆ, ಯಾವಾಗ ಅಲ್ಲಿ ವೆಸ್ಟೆಡ್ ಇಂಟರೆಸ್ಟ್ ಡೆವಲಪ್ ಆಗಿರುತ್ತದೋ ಅಲ್ಲಿ ಮಂತ್ರಿಯಾಗಿ, ಉಸ್ತುವಾರಿ ಸಚಿವರಾಗಿ ಕಂಟಿನ್ಯೂ ಆಗುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಯಾವುದೇ ರೀತಿಯಲ್ಲಿ ನಿಮಗೆ ನೈತಿಕ ಹಕ್ಕು ಬರುವುದಿಲ್ಲ. ಆದರೆ ನೀವು ಉಸ್ತುವಾರಿ ಸಚಿವರಾಗಿರಲು ಅಲ್ಲಿ ಡೆವಲಪ್ ಮಾಡುವುದಕ್ಕೆ ಹೊರತು, ಡೆವಲಪ್ ಮಾಡುವುದನ್ನು ನಿಲ್ಲಿಸುವುದಕ್ಕೋಸ್ಕರ ಅಲ್ಲ. ಇವತ್ತಿನದಿವಸ ಅಲ್ಲಿ ದೊಡ್ಡ

ಅನ್ಯಾಯ ನಡೆದಿದೆ. ಅದಕ್ಕಾಗಿ ಸದಸ್ಯರ ಸಮ್ಮುಖದಲ್ಲಿ ಕಾನೂನು ಪ್ರಕಾರವಾಗಿ ಅಲ್ಲಿ ಮೀಟಿಂಗ್ ಆಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಮೇಲೆ ಅವರು ಏನು ರೆಕಮೆಂಡೇಷನ್ ಈಗಾಗಲೇ ಮಾಡಿದ್ದಾರೆ, ಅದನ್ನು ರಿಸರ್ವ್‌ಬ್ಯಾಂಕ್‌ಗೆ ಕಳುಹಿಸಿ ಅವರಿಗೆ ಬ್ಯಾಂಕ್ ಪರ್ಮಿಷನ್ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ ಏನೆಂದರೆ, ಈಗ ಅವರು ಏನು 400 ಜನ ಬೇನಾಮಿ ಸದಸ್ಯರನ್ನು ಮಾಡಿದ್ದಾರೆ. ಅದಕ್ಕೆ ಹೈಕೋರ್ಟಿನಿಂದ ತಡೆಯಾಜ್ಞೆ ಬಂದಿದೆ ಅವರಿಗೆ ಇದರಲ್ಲಿ ಇಂಟರ್‌ಫಿಯರ್ ಆಗುವುದಕ್ಕೆ ಅವಕಾಶವನ್ನು ಕೊಡಬಾರದು. ತಮಗೇನಾದರೂ ಅವರಿಗೆ ಸಹಾಯ ಮಾಡಬೇಕೆಂದು ಇಂಟರೆಸ್ಟ್ ಇದ್ದರೆ ಇನ್ನೊಂದು ಬ್ಯಾಂಕ್ ತೆರೆಯುವುದಕ್ಕೆ ಅವರಿಗೆ ರಿಜಿಸ್ಟರ್ಡ್ ಮಾಡಿಕೊಡಿ. ಸದಸ್ಯತ್ವವನ್ನು ತೆಗೆದುಕೊಂಡು ಬೇರೆ ಬ್ಯಾಂಕನ್ನು ತೆರೆಯಲಿ. ಆದುದರಿಂದ ದಯವಿಟ್ಟು ನೀವು ಕಾನೂನನ್ನು ಕೈಗೆ ತೆಗೆದುಕೊಂಡು ಈ ರೀತಿ ಮಾಡಿದರೆ ನಾಳೆ ಕೋರ್ಟಿಗೆ Appellate authorityಗೆ ಹೋದಾಗ strictures pass ಆದರೆ ಈ ಸರ್ಕಾರದ ಮೇಲೆ ಈಗಾಗಲೇ ಎಪಿಎಂಸಿಯಲ್ಲಿ ಆಗಿದೆ ಅಥವಾ ನಿಮಗೆ ಏನು ಹೇಳಿದರೂ ನಡೆಯುತ್ತದೆಂದು ಹೇಳಿದರೆ ಅದು ನಡೆದುಕೊಂಡು ಹೋಗಲಿ. ಆದರೆ ನೀವು ಕಾನೂನಿಗೆ ಮನ್ನಣೆಯನ್ನು ಕೊಡುತ್ತೇವೆಂದರೆ ರೂಲ್ಸ್‌ಗೆ ಮಾನ್ಯತೆ ಕೊಡುತ್ತೇವೆಂದರೆ ಅಥವಾ ರೂಲ್ ಆಫ್ ಲಾ, ಈ ರಾಜ್ಯದಲ್ಲಿ ನಡೆಯಲಿ, ಜಿಲ್ಲೆಯಲ್ಲಿ ನಡೆಯಲಿ ಎನ್ನತಕ್ಕಂಥದ್ದು ನಿಮ್ಮ ಆಸೆ ಇದ್ದರೆ ನೀವು ಈ ಕೆಲಸವನ್ನು ಮಾಡಿ ಇಲ್ಲ ಅವರು ಪ್ರಭಾವಶಾಲಿಯಾಗಿದ್ದಾರೆ ಅವರು ಹೇಳಿದ್ದನ್ನೇ ನಾವು ಕೇಳಬೇಕು ಅವರ ಮಾತನ್ನು ನಡೆಸಿಕೊಡಬೇಕು ಎನ್ನತಕ್ಕಂತಹ ಅಭಿಪ್ರಾಯ ನಿಮ್ಮಲ್ಲಿ ಇದ್ದರೆ ಇವತ್ತಿಲ್ಲ ನಾಳೆ ಜನ ನಿಮಗೆ ಬುದ್ಧಿಯನ್ನು ಕಲಿಸುತ್ತಾರೆ. ಏಕೆಂದರೆ ಇವರು ಮಾಡತಕ್ಕಂತಹ ಕೆಲಸಕ್ಕೆ ಅಲ್ಲಿ ಉತ್ತರ ಬರುತ್ತದೆ. ಆದರೆ ಜನ ಉತ್ತರ ಕೊಡುತ್ತಾರೆಂದು ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಿಮ್ಮ ಕೈಯಲ್ಲಿ ಒಂದು ಕಾನೂನು ಇದ್ದ ಹಾಗೆ ಆ ಕಲಂನ್ನು ನ್ಯಾಯಯುತವಾಗಿ, ಜ್ಯೂಡಿಷಿಯಸ್ ಆಗಿ ಅದರ ಉಪಯೋಗವಾಗಬೇಕು. ಆದುದರಿಂದ ನಾನು ದಯವಿಟ್ಟು ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತಿನ ದಿವಸ ಏನು ಅಲ್ಲಿ ಅನ್ಯಾಯ ನಡೆದಿದೆ ಅದನ್ನು ಸರಿಪಡಿಸಬೇಕು. ಆ ಒಂದು ಮೀಟಿಂಗನ್ನು ಹಾಲ್‌ನಲ್ಲಿ ಮಾಡದೆ ಪೋಲೀಸ್, ಜಿಲ್ಲಾಧಿಕಾರಿಗಳು, ಡೆಪ್ಯೂಟಿ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್ ಇವರೆಲ್ಲಾ ಒಗ್ಗಟ್ಟಾಗಿ ಇವತ್ತಿನ ದಿವಸ ಮಂತ್ರಿಗಳ ಪರವಾಗಿಯೇ ಕೆಲಸವನ್ನು ಮಾಡಿದ್ದಾರೆ. ಈ ರಾಜ್ಯದಲ್ಲಿ ಸರ್ಕಾರ ಇದ್ದರೆ ಸಂಸ್ಥೆಗಳನ್ನು ಕಟ್ಟಬೇಕು ಇಲ್ಲದಿದ್ದರೆ ಸರ್ಕಾರ ಅವರ ಕೈಯಲ್ಲಿ ಇಲ್ಲ ಅಂದರೆ ಸಂಸ್ಥೆಗಳನ್ನು ಕಟ್ಟಬಾರದು ಎನ್ನತಕ್ಕಂಥದ್ದು ಆಗುತ್ತದೆ. ಅದಕ್ಕೆ ಅವಕಾಶವಿಲ್ಲ. ಅಂದರೆ ನೀವು ಹೇಳಿಬಿಡಿ, ನೀವು ಬೇರೆ ದೇಶದವರು ಇದ್ದೀರಿ. ನಿಮಗೆ ಇಲ್ಲಿ ಯಾವ ಅವಕಾಶಗಳು ಇಲ್ಲ ಎಂದು ನಮಗೆ ಆದಂತಹ ಇಲ್ಲಿ ಪಾಳೆಗಾರಿಕೆತನ ಇದೆ ಅದಕ್ಕೆ ದಯವಿಟ್ಟು ಯಾರು ಕೈಹಾಕಬಾರದು ಎಂದರೆ ನಾವು ಸಹ ನಿಮ್ಮ ಕಾಲ ಬರುವವರೆಗೆ ತಡೆಯಿರಪ್ಪಾ ಎನ್ನುವಂತಹ ಮಾತನ್ನು ಅವರಿಗೆ ಹೇಳೋಣ. ಆದುದರಿಂದ ತಮ್ಮ ಗಮನಕ್ಕೆ ತರುವುದೇನೆಂದರೆ ಇದರಲ್ಲಿ ತಾವು ನೋಡಬಹುದು. ಬೀದಿಯಲ್ಲಿ ಕುಳಿತುಕೊಂಡು ಜನರಲ್ ಬಾಡಿ ಮೀಟಿಂಗ್‌ನ್ನು ಮಾಡಿ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನು ಎಲೆಕ್ಟ್ ಮಾಡಿದರೆ ರೆಸಲ್ಯೂಷನ್ ಪಾಸು ಮಾಡಿಕೊಂಡಿದ್ದಾರೆ ಮತ್ತು ಯಾವ ರೀತಿಯಾಗಿ ಅವರು

ಮೀಂಟಿಂಗ್ ಕಂಡೆಕ್ಟ್ ಮಾಡಿದ್ದಾರೆ ಎಂಬುದು ಇದರಲ್ಲಿ ಇದೆ ಬೇಕಾದರೆ ಫೋಟೋ ಅಲ್ಲದೆ ಕ್ಯಾಸೆಟ್ಟನ್ನು ಕೂಡ ತಮಗೆ ಕಳುಹಿಸಿಕೊಡುತ್ತೇನೆ. ಬಹುಶಃ ಇದನ್ನು ನೋಡಿದಮೇಲಾದರೂ ಕೂಡ ಮಂತ್ರಿಗಳು ಇದರ ಬಗ್ಗೆ ಒಂದು ಚಿಂತನೆಯನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಾ ಉಸ್ತುವಾರಿ ಸಚಿವರಾದ ಶ್ರೀಮಾನ್ ರೇವಣ್ಣನವರು, ಅವರು ಹೇಳಿದ್ದನ್ನು ನಾವು ಕೇಳುತ್ತೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, ನನ್ನ ಪಕ್ಷವನ್ನು ಬಲಪಡಿಸುವುದಕ್ಕೋಸ್ಕರ ನಾನು ಎಪಿಎಂಸಿ ನಾಮಿನೇಷನ್ ಮಾಡುತ್ತೇನೆ ಹಾಗೆ ನೀವು ಸಹ ಸತ್ಯ ಹೇಳುವುದಿದ್ದರೆ ನಾನು ಕೂಡ ರೇವಣ್ಣನವರು ಮಾಜಿ ಪ್ರಧಾನಮಂತ್ರಿಯ ಮಗ, ಉಸ್ತುವಾರಿ ಸಚಿವ, ನಮ್ಮ ಪಕ್ಷದ ಮುಖಂಡ ಪ್ರಭಾವಶಾಲಿ ವ್ಯಕ್ತಿ, ಅವರ ಮಾತನ್ನು ನಾನು ಮೀರುವುದಕ್ಕೆ ಆಗುವುದಿಲ್ಲ. ಕಾನೂನನ್ನು ಬದಿಗಿಟ್ಟು ಕೋ ಆಪರೇಟೀವ್ ಆ್ಯಕ್ಟನ್ನು ಬದಿಗಿಟ್ಟು ನಾನು ಅವರು ಹೇಳಿದನ್ನು ಶಿರಸಾವಹಿಸಿ ಪಾಲನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಮಾಡಿದ್ದೇನೆಂದು ನೀವು ಸಹ ಒಪ್ಪಿಕೊಂಡರೆ ಅನುಮಾನವಿಲ್ಲ. ಕುಳಿತುಕೊಳ್ಳೋಣ ಮತ್ತೆ ಕಾನೂನು ಪ್ರಕಾರವಾಗಿ ಕೋರ್ಟಿನಲ್ಲಿ ಏನು ಮಾಡುತ್ತಾರೆ ಮಾಡಲಿ. ಆದರೆ ಇಷ್ಟೆಲ್ಲಾ ನಿಮಗೆ ಗೊತ್ತಿದ್ದರೂ ಪ್ರಾರಂಭದಿಂದಲೇ ಎರಡು ವರ್ಷದಿಂದ ರಾದ್ಧಾಂತ ನಡೆದು ಅವರು 18 ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ನಿಮ್ಮಲ್ಲೇ ಗುದ್ದಾಡಿಕೊಂಡು ರಿಜಿಸ್ಟ್ರೇಷನ್ ಮಾಡಿದ ಮೇಲೂ ಕೂಡ ಈ ಪರಿಸ್ಥಿತಿ ಬರುತ್ತದೆ ಅಂದರೆ ಎಷ್ಟರಮಟ್ಟಿಗೆ ನೀವು ಆತ್ಮಸಾಕ್ಷಿಯಾಗಿ ಕೆಲಸ ಮಾಡುತ್ತಾ ಇದ್ದೀರಿ ಎನ್ನತಕ್ಕಂಥದ್ದು ನಾವು ಹೇಳಿದೆವು. ಇನ್ನು ಹೆಚ್ಚಿಗೆ ನಾನು ಮಾತನ್ನು ಬೆಳೆಸದೆ ಹೇಳಿದೆವು. ನಾನು ಹೆಚ್ಚಿಗೆ ಇದರ ಬಗ್ಗೆ ಮಾತನಾಡಲು ಬಯಸುವುದಿಲ್ಲ. ಇದನ್ನು ತಕ್ಷಣ ಆ ದಿನ ಬೀದಿಯಲ್ಲಿ ನಿಂತುಕೊಂಡು ಜನರಲ್ ಬಾಡಿ ಮೀಟಿಂಗ್‌ನ್ನು ಏನು ಮಾಡಿದ್ದಾರೆ ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು. ಮತ್ತು ನಿಮ್ಮ ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಏಕಾಗಿ ಅಡ್ಡಿ ಬಂದರು. ಜಾಯಿಂಟ್ ರಿಜಿಸ್ಟ್ರಾರ್‌ರವರು ಕೂಡ ಅವರಿಗೆ ತೊಂದರೆ ಕೊಟ್ಟರು. ಅವರುಗಳ ಮೇಲೆಯೂ ಕೂಡ ನೀವು ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ಅವರನ್ನು ಸಸ್ಪೆಂಡ್ ಮಾಡಬೇಕು. ಅವರು ಕಾನೂನಿನ ಅದೇಶವನ್ನು ಪಾಲನೆ ಮಾಡುವುದಕ್ಕಾಗಿ ಇದ್ದಾರೆಯೇ ಹೊರತು ಕಾನೂನುಬಾಹಿರವಾದಂತಹ, ಯಾವುದೋ ಮೌಖಿಕ ಆದೇಶವನ್ನು ತೆಗೆದುಕೊಂಡು ಅಥವಾ ಅವರ ಹೇಳಿದಂತಹ ಮಾತುಗಳನ್ನು ಕೇಳಿಕೊಂಡು ಅಲ್ಲಿ ವರ್ತನೆ ಮಾಡುವುದಕ್ಕಾಗಿ ಇರತಕ್ಕಂತವರು ಅಲ್ಲ, ಇರಬಹುದು. ಡೆವಲಪ್‌ಮೆಂಟ್ ವರ್ಕ್ಸ್ ರಿವ್ಯೂ ಮಾಡುತ್ತಾರೆ ತಪ್ಪು ಏನಾದರೂ ಇದ್ದರೆ ಇದನ್ನು ಸರಿಪಡಿಸಿ ಅಂದರೆ ಸರಿಪಡಿಸಬಹುದು. ಅದನ್ನು ಬಿಟ್ಟು ಕಾನೂನನ್ನು ಕೈಗೆ ತೆಗೆದುಕೊಂಡಂತಹ, ಮಂತ್ರಿಗಳ ಮಾತನ್ನು ಕೇಳತಕ್ಕಂತಹ ಅಧಿಕಾರಿಗಳನ್ನು ನೀವು ಇಟ್ಟುಕೊಂಡು ಅಲ್ಲಿ ಸಹಕಾರ ಸಂಘಗಳನ್ನು ನಡೆಸುತ್ತೇವೆ, ಅದಕ್ಕೆ ಪ್ರೋತ್ಸಾಹವನ್ನು ಕೊಡುತ್ತೇವೆ, ಬೆಳೆಸುತ್ತೇವೆ ಅಂದರೆ ಇದು ಸಾಧ್ಯವಿಲ್ಲ. ಅದಕ್ಕೆ ದಯವಿಟ್ಟು ಆ ಡೆಪ್ಯೂಟಿ ರಿಜಿಸ್ಟ್ರಾರ್‌ನ್ನು ಸಸ್ಪೆಂಡ್ ಮಾಡಿ, ಜಾಯಿಂಟ್ ರಿಜಿಸ್ಟ್ರಾರ್‌ರವರನ್ನು ಸಸ್ಪೆಂಡ್ ಮಾಡಿ ಮತ್ತು ಈಗ ಅವರು ಏನು ಸಭೆಯನ್ನು ಮಾಡಿದ್ದಾರೆ ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ರಿಸರ್ವ್‌ಬ್ಯಾಂಕ್‌ಗೆ ಕಳುಹಿಸಿ ಅವರಿಗೆ ಬ್ಯಾಂಕ್‌ನ ಅನುಮತಿಯನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳಿ ತಮ್ಮ ಮುಖಂತರ ಮಾನ್ಯ ಸಚಿವರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಖರ್ಗೆಯವರು ಸವಿಸ್ತಾರವಾಗಿ ಈ ವಿಷಯದ ಬಗ್ಗೆ ಸರ್ಕಾರದ ಗಮನಸೆಳೆಯುವಂತ ಪ್ರಯತ್ನ ಮಾಡಿದ್ದಾರೆ. ಬಹುಶಃ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ಮಹಿಳಾ ಸಹಕಾರಿ ಬ್ಯಾಂಕ್‌ನ್ನು ಮಾಡುತ್ತೇವೆ ಎಂದು ಹೋದಂತಹ ಜನರನ್ನು ಅಡ್ಡಿಪಡಿಸಿ ರಸ್ತೆಯಲ್ಲಿ ಅವರು ಜನರಲ್ ಬಾಡಿ ಮೀಟಿಂಗ್ ಮಾಡುವ ರೀತಿ ಮಾಡಿದ್ದೀರಾ ? ಈ ಜನರಲ್ ಬಾಡಿ ಮೀಟಿಂಗ್ ಆಗಬಾರದೆಂದು ಪೊಲೀಸ್ ಪಹರೆಯೊಂದಿಗೆ ಎಲ್ಲಾ ರೀತಿಯ ಪ್ರಯತ್ನ ಸರ್ಕಾರದ ಕಡೆಯಿಂದಲೆ, ಜಿಲ್ಲಾಧಿಕಾರಿಗಳು ಸಹಕಾರಿ ಇಲಾಖೆಯ ಅಧಿಕಾರಿಗಳು ಎಲ್ಲರೂ ಸೇರಿ ಇದನ್ನು ತಡೆಯುವಂತಹ ಪ್ರಯತ್ನವನ್ನು ಮಾಡಿದರೂ ಸಹ ನೂರಾರು ಜನ ಪೋಲೀಸರ ಮಧ್ಯೆ ನಿರ್ಭೀತಿಯಿಂದ ಮಹಿಳೆಯರು ಆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಭಾಗವಹಿಸಿದರು. ಆದುದರಿಂದ ನಾನು ಒತ್ತಾಯ ಮಾಡುವುದೇನೆಂದರೆ ಈಗಾಗಲೇ ಆ ಬ್ಯಾಂಕ್ ರಿಜಿಸ್ಟ್ರೇಷನ್ ಆಗಿದೆ. ಅವರು ಈಗಾಗಲೇ ಮನೆಮನೆ ತಿರುಗಿ 18 ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಬೇರೆ ಯಾರಾದರೂ ಮಹಿಳಾ ಸದಸ್ಯರು ಸದಸ್ಯರಾಗಬೇಕೆಂದು ಅಪೇಕ್ಷೆ ಇದ್ದರೆ ಮುಂದೆ ಆ ಬ್ಯಾಂಕ್ ಅಸ್ತಿತ್ವಕ್ಕೆ ಬಂದ ಮೇಲೆ ಬೇರೆ ಸಮಯದಲ್ಲಿ ಸದಸ್ಯರಾಗುವುದನ್ನು ಯಾರು ಅಡ್ಡಿ ಮಾಡುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲ. ಆದರೆ ನಿನ್ನೆ ಇಲ್ಲಿ ನಡೆದಿರುವಂತಹದ್ದು ಯಾರಿಗೂ ಸಹ ಶೋಭೆ ತರುವಂತಹದ್ದಲ್ಲ. ನಿನ್ನೆಯ ದಿವಸ ನನ್ನನ್ನು ಸಹ ಹತ್ತಾರು ಮಹಿಳೆಯರು ಬಂದು ಭೇಟಿ ಮಾಡಿದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ ನೀವುಗಳು ಕೋ ಆಪರೇಟೀವ್ ಸಚಿವರನ್ನು ಹೋಗಿ ಭೇಟಿ ಮಾಡಿ, ಖಂಡಿತವಾಗಿ ನಿಶ್ಚಿತವಾಗಿ, ಇದನ್ನು ರಿಸರ್ವ್‌ಬ್ಯಾಂಕ್‌ಗೆ ಕಳುಹಿಸಿಕೊಟ್ಟು ಅನುಮತಿಯನ್ನು ಕೊಡಿಸುವಂತಹ ಪ್ರಯತ್ನವನ್ನು ಮಾಡುತ್ತಾರೆ, ಎಂದು ಹೇಳಿದೆ

11.00 ಎ.ಎಂ.

ಆದರೆ, ಮಹಿಳೆಯರಿಗೆ ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆ, ಸಹಕಾರ ಕೊಡುತ್ತೇವೆ ಎಂದು ಹೇಳುವಂಥ ಈ ಕಾಲದಲ್ಲಿ ಈ ಸಹಕಾರಿ ತತ್ವವನ್ನು ಬುಡಮೇಲು ಮಾಡುವ ರೀತಿಯಲ್ಲಿ ನಿಮ್ಮ ಅಧಿಕಾರಿಗಳು ವರ್ತನೆ ಮಾಡಿದರೆ, ಜಿಲ್ಲಾಧಿಕಾರಿಗಳು ವರ್ತನೆ ಮಾಡಿದರೆ, ಯಾರದೋ ಪರ ನಡವಳಿಕೆಯನ್ನು ನಡೆಸಿದರೆ ಬಹುಶಃ ಯಾರಿಗೂ ಶೋಭೆ ತರುವಂಥ ಸಂಗತಿಯಲ್ಲ. ಈಗಲಾದರೂ ಸಹಕಾರಿ ಸಚಿವರಿಗೆ ಎಲ್ಲಾ ವಿವರಗಳು ಮನವರಿಕೆಯಾಗಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ನಿಮ್ಮ ಸಹಕಾರಿ ಇಲಾಖೆಯ ಅಧಿಕಾರಿಗಳು ಇಲ್ಲಸಲ್ಲದ ಸಣ್ಣಪುಟ್ಟ ತಪ್ಪುಗಳನ್ನು ಹುಡುಕಿ ಅವರಿಗೆ ನೋಟೀಸ್ ಕೊಡುವಂಥ ಪ್ರಯತ್ನ ಸಹ ಮಾಡಿದ್ದಾರೆ. ಬಹುಶಃ ಇನ್ನೂ ಪ್ರಾರಂಭ ಹಂತದಲ್ಲೇ ಸಣ್ಣಪುಟ್ಟ ತಪ್ಪುಗಳಾದರೆ ಅದನ್ನು ಸರಿಪಡಿಸಿ ಈ ರೀತಿ ಕೆಲಸ ಮಾಡಬೇಕು ಎಂದು ಯಾವ ಸಹಕಾರ ಇಲಾಖೆಯ ಅಧಿಕಾರಿಗಳು ಮಾರ್ಗದರ್ಶನ ಮಾಡಬೇಕಾಗಿತ್ತೊ ಅವರೇ ಈ ಬ್ಯಾಂಕಿನ ಜನರಲ್ ಬಾಡಿ ಮೀಟಿಂಗ್ ಆಗದ ರೀತಿಯಲ್ಲಿ ಅಡ್ಡಿ ಆತಂಕಗಳನ್ನು ಮಾಡುವಂಥಾದ್ದು ಯಾರಿಗೂ ಶೋಭೆ ತರುವಂಥ ಸಂಗತಿ ಅಲ್ಲ. ಸನ್ಮಾನ್ಯ ಖರ್ಗೆಯವರು ಹೇಳಿದಂತೆ ಇನ್ನೊಂದು ಮಹಿಳಾ ಸಹಕಾರ ಸಂಘ ಯಾರಾದರರೂ ಮಾಡಬೇಕೆಂದರೆ, ಬೇರೆಯವರಿಗೆ ಇನ್ನೊಂದು ಅವಕಾಶ ಕೊಡುವುದಕ್ಕೆ

ನಿಮ್ಮ ಕಾನೂನಿನಲ್ಲಿ ಅಡ್ಡಿ ಏನೂ ಇಲ್ಲ. ಆದುದರಿಂದ, ಈಗಾಗಲೇ ಸಾವಿರಾರು ಜನ ಮಹಿಳೆಯರು ಮುಂದೆ ಬಂದು 18 ಲಕ್ಷ ರೂಪಾಯಿಗಳ ಷೇರನ್ನು ಮನೆಮನೆಗೆ ಹೋಗಿ ಸಂಗ್ರಹ ಮಾಡಿರುವಂಥ ಕಾಲದಲ್ಲಿ ಮುಕ್ತಿ ಹಾಸನ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವಂಥ ಪರಿಸ್ಥಿತಿ ತರುವುದಕ್ಕೆ ಯಾರೂ ಪ್ರಯತ್ನ ಮಾಡಬಾರದು. ಎಲ್ಲಾ ವಿವರವನ್ನು ತಮಗೂ ಮನವರಿಕೆ ಮಾಡಿದ್ದೇವೆ, ತಮ್ಮ ಕಣ್ಣಮುಂದೆ ಎಲ್ಲಾ ಸಂಗತಿಗಳು ಇವೆ. ಯಾರನ್ನೋ ರಕ್ಷಣೆ ಮಾಡುವುದಕ್ಕೋಸ್ಕರ, ಯಾರದೋ ಪರವಾಗಿ ಇದೇ ರೀತಿ ನಡೆಯಬೇಕು ಎನ್ನುವಂಥ ರೀತಿಯಲ್ಲಿ ಮಾಡುವಂಥದ್ದು ಸರ್ಕಾರಕ್ಕೆ ಶೋಭೆ ತರುವಂಥ ಸಂಗತಿಯಲ್ಲ. ನಾನು ಯಾರ ಹೆಸರನ್ನು ಕೂಡ ಇಲ್ಲಿ ತರುವುದಕ್ಕೆ ಇಚ್ಛೆಪಡುವುದಿಲ್ಲ. ಬಹುಶಃ ಅದಕ್ಕೆ ಎಲ್ಲಾದರೂ ಮಂಗಳ ಹಾಡಬೇಕೆಂದು ನಿಮಗೆ ಅಪೇಕ್ಷೆ ಇದ್ದರೆ ಮೊನ್ನೆ ರಸ್ತೆಯಲ್ಲಿ ಏನು ಜನರಲ್ ಬಾಡಿ ಮೀಟಿಂಗ್ ಆಯಿತು. ಅದನ್ನೇ ಅಂಗೀಕರಿಸಿ ರಿಸರ್ವ್ ಬ್ಯಾಂಕ್‌ನ ಅನುಮತಿಗೆ ಕಳುಹಿಸಿಕೊಡಬೇಕು. ಈಗ ಆಗಿರುವಂಥ ಗೊಂದಲವನ್ನು ಸರಿಪಡಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕು ಮತ್ತು ಜಿಲ್ಲಾಧಿಕಾರಿ ಇರಲಿ, ಸಹಕಾರ ಇಲಾಖೆಯ ಅಧಿಕಾರಿಗಳೇ ಇರಲಿ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾಗುತ್ತದೆ. ನಾವು ಚುನಾಯಿತ ಪ್ರತಿನಿಧಿಗಳು ನಮ್ಮ ಸಲಹೆಗಳನ್ನು ನಾವು ಕೊಡುತ್ತೇವೆ. ಅಂತಿಮವಾಗಿ ಅಧಿಕಾರಿಗಳೆ ಕಾನೂನು ಚೌಕಟ್ಟಿನಲ್ಲಿ ಕೆಲಸಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಮಾಡಿದರೆ ಬಹುಶಃ ಅವರಿಗೂ ಸಹ ನಾಳೆ ಯಾವುದೇ ರಕ್ಷಣೆ ಸಿಗುವುದಿಲ್ಲ. ಆದ್ದರಿಂದ ದಯಮಾಡಿ ಇವೊತ್ತು ಈ ಒಂದು ಹೇಮಾವತಿ ಮಹಿಳಾ ಸಹಕಾರ ಬ್ಯಾಂಕಿಗೆ ರಿಸರ್ವ್ ಬ್ಯಾಂಕ್‌ನ ಅನುಮತಿಯನ್ನು ಕೊಡಿಸಿ ಕಾನೂನಿನ ಚೌಕಟ್ಟಿನಲ್ಲಿ ಅವರು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಈ ಅಡ್ಡಿ ಆತಂಕಗಳು, ಕೊರತೆಗಳು ಏನು ಆಯಿತು, ಜನರಲ್ ಬಾಡಿ ಆಗುವುದಕ್ಕೆ ಅಡ್ಡಿ ಯಾರು ಮಾಡಿದರು ನಿಮ್ಮ ಅಧಿಕಾರಿಗಳು, ಅವರ ಮೇಲೂ ಸಹ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಸಹಕಾರ ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವ ಇದೆ ಇಂತಹ ವಿಚಾರಗಳಿಗೆ ಸಾಮಾನ್ಯವಾಗಿ ಅವರು ಅವಕಾಶ ಕೊಡುವುದಿಲ್ಲ. ಮೊದಲಿನಿಂದಲೂ ಇಂತಹದ್ದರಲ್ಲಿ ಬಹಳ ಪ್ರಾಮಾಣಿಕವಾದಂಥ ನಡೆ, ನುಡಿ ಎಲ್ಲವನ್ನು ಇಟ್ಟುಕೊಂಡಿರತಕ್ಕಂಥವರು ಮತ್ತು ಸಹಕಾರಿ ಕ್ಷೇತ್ರದಲ್ಲಿ ಅಪಾರವಾಗಿ ಸೇವೆ ಮಾಡಿರತಕ್ಕಂಥ ವ್ಯಕ್ತಿ, ಅವರು ಮಂತ್ರಿ ಆದಮೇಲೂ ಸಹ, ನಾನು ಅವರ ಭಾಷಣಗಳ ಧಾಟಿಯನ್ನು ನೋಡಿದರೆ ಬಹಳ ಕ್ರಾಂತಿಕಾರಕವಾದ ಭಾಷಣವನ್ನು ಮಾಡುತ್ತಾರೆ. ಆದರೆ ಕೃತಿಯಲ್ಲಿ ಬೇರೆ. ಈಗ ಎರಡು ವ್ಯತ್ಯಾಸ ಇದೆ. ಭಾಷಣ ಒಂದುಕಡೆ ಮತ್ತು ಕೆಲಸ ಒಂದುಕಡೆ. ಈ ರೀತಿಯಾಗಿ ಅದು ಮಾನಸಿಕವಾಗಿ ಬಹಳ ಚಿಂತನೆ ಆಗುತ್ತದೆ, ಇದು ನೋಡಿರತಕ್ಕಂಥದ್ದು. ಆದರೆ ನಿನ್ನೆ ಮಹಿಳಾ ಸಂಘದ ಬಗ್ಗೆ ಇತ್ತೀಚೆಗೆ ಹಾಸನದಲ್ಲಿ 29ನೇ ತಾರೀಖು ನಡೆದಿರತಕ್ಕಂಥ ಈ ಪರಿಸ್ಥಿತಿಯನ್ನು ನೋಡಿದರೆ ಇದು ನಿಜವಾಗಿಯೂ ನನಗನಿಸುತ್ತದೆ ಪ್ರಜಾಪ್ರಭುತ್ವ ಇದೆಯೇ? ಇದು ಪ್ರಜಾತಂತ್ರಕ್ಕೆ ಅತ್ಯಂತ ಅಪಾಯಕಾರಿ ಬೆಳವಣಿಗೆ. ಇಂತಹ ಬೆಳವಣಿಗೆಯನ್ನು ಯಾರೂ ಸಹಿಸತಕ್ಕಂಥ ಬೆಳವಣಿಗೆ ಏನೂ ಅಲ್ಲ. ಮಹಿಳೆಯರು

ಸಾಮಾನ್ಯವಾಗಿ ಪುರುಷರು ಏನೂ ಸಭೆ ಮಾಡಿದರು ಅದರಲ್ಲಿ ಒಬ್ಬರಿಂದ ಗದ್ದಲ ಆಯಿತು ಅದರ ಬಗ್ಗೆ ಅವರನ್ನು ಹೊರಗಡೆ ಹಾಕಿದರು, ಬಂಧನ ಮಾಡಿದರು ಎಂದು ಹೇಳತಕ್ಕಂಥದ್ದು ಒಂದು. ಮಹಿಳೆಯರು ಅವರ ಶತ್ರುಗಳೇ ಆಗಿರಬಹುದು, ಬೇರೆ ಪಕ್ಷದವರೇ ಆಗಿರಬಹುದು, ಯಾರೇ ಆಗಿರಬಹುದು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮಾಡತಕ್ಕಂಥ ಸಹಕಾರ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆ ನಡೆಸುವುದಕ್ಕೆ ಕಾನೂನಿನ ಪ್ರಕಾರ ಎಲ್ಲಾ ರೀತಿಯ ಒಂದು ಸಂಪೂರ್ಣ ಅಧಿಕಾರ ಇದ್ದು, ಕಾನೂನಿನ ಪ್ರಕಾರ ನಡೆಯತಕ್ಕಂಥದ್ದನ್ನ ಅಡ್ಡಿಪಡಿಸಿ ಆ ಸಭೆ ನಡೆಯದಂತೆ ಮಾಡಿ ಆ ಮಹಿಳೆಯರು ರಸ್ತೆಯಲ್ಲಿ ಬಂದು ಸಭೆ ನಡೆಸತಕ್ಕಂಥ ಈ ವಿಚಾರ ಇದೆಯಲ್ಲ ಇದು ಒಳ್ಳೆಯ ಸೂಚನೆ ಅಲ್ಲ. ದೇಶಕ್ಕೆ ಆಗಬಹುದು, ರಾಜ್ಯಕ್ಕೆ ಆಗಬಹುದು ಇದೊಂದು ಕೆಟ್ಟ ಸೂಚನೆ. ಕೆಟ್ಟ ದಿಕ್ಕಿಗೆ ನಾವು ಹೋಗುತ್ತಿದ್ದೇವೆ. ಆ ದೃಷ್ಟಿಯಿಂದ ಈ ಬಗ್ಗೆ ಸಹಕಾರ ಸಚಿವರು ಸ್ಪಷ್ಟವಾದ ಸತ್ಯವನ್ನು ಈ ಸಭೆಯ ಮುಂದೆ ಮಂಡಿಸಬೇಕು. ಇದರಲ್ಲಿ ಯಾರನ್ನು ರಕ್ಷಣೆ ಮಾಡಬೇಕು, ಯಾರನ್ನು ಬಿಡಬೇಕು ಎಂದು ಇಲ್ಲ. ಸತ್ಯವನ್ನು ಮಂಡಿಸಬೇಕು. ಮತ್ತು 144ನೇ ಕಾಲಂ ಜಾರಿ ಮಾಡಬೇಕಾದರೆ, ಈ ಸೆಕ್ಷನ್ 144 ಯಾವಾಗ ಜಾರಿಮಾಡಬೇಕು, ಪೊಲೀಸ್ ಕಾಯಿದೆ ಪ್ರಕಾರ 35ನೇ ಸೆಕ್ಷನ್ ಜಾರಿ ಮಾಡುತ್ತಾರೆ. ಅದಕ್ಕಿಂತ ಲಾಠಿ ತೋರಿಸಿದರೆ ಹೆಣ್ಣುಮಕ್ಕಳು ಬೀದಿಗೆ ಬರುವುದಿಲ್ಲ, ಒಬ್ಬ ಪೊಲೀಸ್ ಕಂಡರೂ ಹೆಣ್ಣು ಮಕ್ಕಳು ಬೀದಿಗೆ ಬರುವುದಿಲ್ಲ. ಅಂತಹದ್ದರಲ್ಲಿ 144ನೇ ಸೆಕ್ಷನ್ ಜಾರಿಮಾಡತಕ್ಕಂಥ ಪರಿಸ್ಥಿತಿ, ಮಿಕ್ಕಿದ್ದು ಏನೇ ಆಗಲೀ, 144ನೇ ಸೆಕ್ಷನ್ ಜಾರಿ ಮಾಡತಕ್ಕಂಥ ಪರಿಸ್ಥಿತಿ ಉದ್ಭವವಾಗಿತ್ತೆ. ಯಾವ ಮಹಿಳೆ ಯಾರಿಗೆ ಹೊಡೆದರು, ಯಾವ ಮಹಿಳೆ ಯಾರ ಕತ್ತು ತೆಗೆದರು, ಯಾವ ಮಹಿಳೆ ಎಲ್ಲಿ ಬೆಂಕಿ ಇಟ್ಟರು, ಯಾವ ಮಹಿಳೆಗೆ ರಸ್ತೆಯಲ್ಲಿ ಏನೇನು ತೊಂದರೆಗಳಾಯಿತು ಇದನ್ನೆಲ್ಲ ತಾವು ಸೆಕ್ಷನ್ 144 ಜಾರಿ ಮಾಡಬೇಕಾದರೆ ಕಣ್ಣುಮುಚ್ಚಿಕೊಂಡು ಮಾಡಿದರೇನು? ಆ ಜಿಲ್ಲಾಧಿಕಾರಿಯವರಿಗೆ ನಿಜವಾಗಿಯೂ ಗೌರವ ಇದ್ದರೆ ಇದನ್ನು ಮಾಡಬಾರದು. ಜಿಲ್ಲಾಧಿಕಾರಿ ಇದನ್ನು ಕೊಡತಕ್ಕಂಥಹವರು. ಜಿಲ್ಲೆಯಲ್ಲಿ ಇಂತಹ ಪೊಲೀಸ್ ಕಾಯಿದೆಯನ್ನು ಜಾರಿ ಮಾಡಬೇಕಾದರೆ ಅವರು ಅನುಮತಿಯನ್ನು ಕೊಡಬೇಕು. ಅವರು ಅನುಮತಿಯನ್ನು ಕೊಡಬೇಕಾದರೆ ಅವರಿಗೆ ತಲೆ ಇತ್ತೆ ಎಂದು ನಾನು ಕೇಳುತ್ತೇನೆ. ಆ ಜಿಲ್ಲಾಧಿಕಾರಿ ಯಾರೇ ಆಗಿರಲಿ. ಅವರಿಗೆ ನಾನು ಇವೊತ್ತು ಹೇಳುತ್ತಿದ್ದೇನೆ. ಎಷ್ಟೇ ಒತ್ತಡ ಬರಲಿ ಈ ಸೆಕ್ಷನ್ 144ನ್ನು ಜಾರಿ ಮಾಡುವಾಗ ಅವರು ಮೊದಲು ಯೋಚನೆ ಮಾಡಬೇಕು? ಪರಿಸ್ಥಿತಿ ಏನು? ಯಾವಾಗ ಸೆಕ್ಷನ್ 144ನ್ನು ಜಾರಿಮಾಡಬೇಕು ಎಂದರೆ ಎಲ್ಲವೂ ಕೈಮೀರಿ ಹೋದಾಗ ಜಾರಿಮಾಡಬೇಕು. ಅದು ಯಾವುದು ಇಲ್ಲದೆ ಆ ಮಹಿಳೆಯರ ಮೇಲೆ ದೌರ್ಜನ್ಯ ಮಾಡತಕ್ಕಂಥ ಪರಿಸ್ಥಿತಿ ಇದೆಯಲ್ಲ, ಇದು ಒಳ್ಳೆಯ ಸೂಚನೆ ಅಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ನಾನು ಖರ್ಗೆಯವರು ಹೇಳಿದಂಥ ಮಾತಿಗೆ ಸಮರ್ಥನೆ ಕೊಡುತ್ತೇನೆ. ಹಿಂದೆ ಈ ಜಿಲ್ಲಾಮಂತ್ರಿಗಳು ಎನ್ನತಕ್ಕಂಥ ವ್ಯವಸ್ಥೆ ಇತ್ತು ಸಂತೋಷ ಇರಬೇಕು. ಆದರೆ ಜಿಲ್ಲೆಯವರೆ ಮಂತ್ರಿಗಳಾಗುವುದು ಬೇಡ. ಅದು ಯಾವುದೇ ಜಿಲ್ಲೆಯಾಗಲಿ, ಕರ್ನಾಟಕದ ಉದ್ದಗಲಕ್ಕೂ ನಾನು ಹೇಳುತ್ತೇನೆ ಒಂದೇ ಜಿಲ್ಲೆ ಎಂದು ಅಲ್ಲ. ಜಿಲ್ಲಾಮಂತ್ರಿಗಳು ಆದರೆ ಏನಾಗುತ್ತದೆ ಅಧ್ಯಕ್ಷರೆ, ಜಿಲ್ಲಾಮಂತ್ರಿ ಎಂದರೆ ಆಯಾ ಜಿಲ್ಲೆಗೆ ಅವರವರ ಪಕ್ಷದ ಅಧ್ಯಕ್ಷರಿದ್ದಂತೆ. ಆ ಪಕ್ಷಕ್ಕೆ, ಅವರೇನು ಮಂತ್ರಿಗಳಲ್ಲ. ಒಂದೇ ಪಕ್ಷಕ್ಕೆ ಅಧ್ಯಕ್ಷರೆ

ಹೊರತು ಅವರು ಸಾರ್ವಜನಿಕವಾದಂಥ ಜಿಲ್ಲಾ ಮಂತ್ರಿಗಳಾಗುವುದಿಲ್ಲ. ಅವರು ಜಿಲ್ಲಾಮಂತ್ರಿಗಳು ಅಂದರೆ ಒಂದು ರೀತಿಯ ಪಾಳೆಗಾರಿಕೆ, ದರ್ಬಾರು, ಅವರ ಹಿಂದೆ ಇಡೀ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಗುಲಾಮರಾಗಿರುತ್ತಾರೆ. ಅವರು ಹೇಳುವ ಮಾತನ್ನೇ ಕೇಳುವಂಥ ವ್ಯವಸ್ಥೆ ಎಲ್ಲಾ ಕಡೆ ನಡೆದಿದೆ. ಇದು ಕೇವಲ ಯಾವುದೋ ಒಂದು ಜಿಲ್ಲೆ ಎಂದು ಅಲ್ಲ. ಎಲ್ಲಾ ಜಿಲ್ಲೆಯಲ್ಲೂ ಇದೇ ಪರಿಸ್ಥಿತಿ ಇದೆ. ಅವರನ್ನೇ ಕಟ್ಟಿಕೊಳ್ಳುವುದು, ಒಂದು ಮೆರವಣಿಗೆ ಮಾಡುವುದು, ಒಂದು ಸಭೆ ಮಾಡುವುದು, ಮಿಕ್ಕೆಲ್ಲ ಶಾಸಕರುಗಳು ಅವರ ಮಾತನ್ನು ಕೇಳದೆ ಇರತಕ್ಕಂಥದ್ದು. ಆದ್ದರಿಂದ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ತಮಗೂ ಇದರ ಬಗ್ಗೆ ಸೂಚನೆಯನ್ನು ಕೊಡುವುದಕ್ಕೆ ಮತ್ತು ಸಲಹೆಗಳನ್ನು ಕೊಡುವುದಕ್ಕೆ ಅಧಿಕಾರ ಇದೆ. ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಜಿಲ್ಲಾಮಂತ್ರಿಗಳು ಎನ್ನತಕ್ಕಂಥವರು, ಅದೇ ಜಿಲ್ಲೆಯವರನ್ನು ಮಂತ್ರಿಗಳನ್ನಾಗಿ ಮಾಡುವುದರಿಂದ ಅತ್ಯಂತ ಅಪಾಯಕಾರಿ ಬೆಳವಣಿಗೆ ಬೆಳೆಯುತ್ತಾ ಇದೆ. ಅಭಿವೃದ್ಧಿಗಿಂತ ಹೆಚ್ಚಾಗಿ ಇಲ್ಲಿ ಗೊಂದಲ ಜಾಸ್ತಿಯಾಗುತ್ತದೆ. ಆ ದೃಷ್ಟಿಯಿಂದ ಮೊದಲು ಇದು ಆಗಬೇಕು. ಇದು ಮಹಿಳೆಯರಿಗೆ ಆಗಿರತಕ್ಕಂಥ ಅಪಮಾನ ಮತ್ತು ಅವರಿಗೆ ನ್ಯಾಯವನ್ನು ದೊರಕಿಸಿಕೊಡುವುದರಲ್ಲಿ ಸರ್ಕಾರ ಪ್ರಾಮಾಣಿಕವಾಗಿ, ನಿರ್ದಾಕ್ಷಿಣ್ಯವಾಗಿ ಹೇಳಿಕೆಯನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್ ರವರು ಹೇಳುತ್ತಿದ್ದರು. ಸಹಕಾರ ಸಚಿವರ ಬಗ್ಗೆ ಬಹಳಷ್ಟು ಗೌರವ ಇದೆ ಎಂದು ಹಾಗೆಯೇ ಮೊದಲು ನನಗೂ ಕೂಡ ಬಹಳ ಗೌರವ ಇತ್ತು. ಆದರೆ ಇತ್ತೀಚೆಗೆ ನಮ್ಮ ಜಿಲ್ಲೆಯ ಕೆಟ್ಟ ರಾಜಕೀಯದ ಹವೆ ತಮಗೂ ತಗುಲಿರುವುದರಿಂದ ಆ ಗೌರವ ನಿಮ್ಮ ಬಗ್ಗೆ ಸ್ವಲ್ಪ ಕಡಿಮೆಯಾಗುತ್ತಿದೆ. ಕಳೆದ ಹದಿನೈದು ದಿವಸಗಳ ಹಿಂದೆ ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಮೂರು ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡಿರುವಂಥದ್ದರ ಬಗ್ಗೆ. ಹಾಗೆ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೆ, ತಾವು ಪೀಠದಲ್ಲಿ ಇರಲಿಲ್ಲ, ಉಪಾಧ್ಯಕ್ಷರು ಇದ್ದರು. ನಾನು ಅವರಿಗೆ ಒಂದೇ ಮಾತಿನಲ್ಲಿ ವಿನಂತಿ ಮಾಡಿಕೊಂಡೆ. ನೋಡಿ ನಮ್ಮ ಮೇಲೆ ನ್ಯಾಯದ ತಕ್ಕಡಿ ಇದೆ, ನಿಮ್ಮ ತಲೆ ಮೇಲೆ ಅಂಥ ಆದರ್ಶ ಇರತಕ್ಕಂಥ ಟೋಪಿ ಇದೆ ಎಂದು ಭಾವಿಸಿದ್ದೇನೆ, ನೀವೇ ಆತ್ಮಾವಲೋಕನ ಮಾಡಿಕೊಂಡು ಹೇಳಿ, ಮಾಡಿರುವುದು ಸರಿಯೋ ತಪ್ಪೋ ಎಂದು. ನಾನು ಆ ವಿಷಯದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ಸಚಿವರು ಹೇಳಿದರು, ಅದು ದಾಖಲಾತದಲ್ಲಿದೆ. ಇವೊತ್ತು ನೀವು ಆತ್ಮಾವಲೋಕನ ಮಾಡಿಕೊಂಡು ಹೇಳುತ್ತೀರಾ, ಇಲ್ಲವೇ ಎಂಬ ಅನುಮಾನ ಕೂಡ ನನಗೆ ಇದೆ. ಈಗ ಈ ಹಾಸನ ಜಿಲ್ಲೆಯ ಹೇಮಾವತಿ ಮಹಿಳಾ ಸಹಕಾರ ಬ್ಯಾಂಕಿನ ಒಂದು ನೋಂದಣಿ ಮಾಡತಕ್ಕಂಥ ಸಂದರ್ಭದಲ್ಲಿ ಬಹಳ ಅಡಚಣೆಯನ್ನು ಮಾಡಿದರು. ಆ ವಿಷಯವನ್ನು ನಾವು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. ಸುಮಾರು ಹನ್ನೆರಡೂವರೆ ಲಕ್ಷ ರೂಪಾಯಿಯ ಷೇರನ್ನು ಸಂಗ್ರಹಣೆ ಮಾಡಬೇಕು, 1,500 ಸದಸ್ಯರನ್ನು ನೋಂದಣಿ ಮಾಡಬೇಕೆಂದು ಹೇಳಿ ರಿಸರ್ವ್ ಬ್ಯಾಂಕಿನ ಆದೇಶ ಇತ್ತು. ಆದರೆ ಪಾಪ ಆ ಮಹಿಳೆಯರು ಇಡೀ ಜಿಲ್ಲೆಯನ್ನು ಸುತ್ತಿ 13,25,420 ರೂಪಾಯಿಗಳ ಷೇರನ್ನು ಸಂಗ್ರಹಣೆ ಮಾಡಿದರು. 3,530 ಷೇರುದಾರರನ್ನು ಕೂಡ

ನೋಂದಣಿ ಮಾಡಿಸಿದರು. ಇದಾದಮೇಲೂ ಕೂಡ ನೋಂದಣಿ ಮಾಡಲಿಲ್ಲ. ಸದನದಲ್ಲಿ ಪ್ರಸ್ತಾಪ ಮಾಡಿದೆವು. ತಮ್ಮನ್ನು ಕೂಡ ಭೇಟಿ ಮಾಡಿ ನೋಂದಣಿ ಮಾಡಿಕೊಡಿ ಎಂದು ವಿನಂತಿ ಮಾಡಿಕೊಂಡೆವು. ನೋಂದಣಿ ಮಾಡುವಾಗ ನಿಮ್ಮ ಇಲಾಖಾಧಿಕಾರಿಗಳು ಷರತ್ತುಗಳನ್ನು ಹಾಕಿದರು, ಬೇರೆಯವರ ಬೇನಾಮಿ ಹೆಸರಿನಲ್ಲಿ ಅಲ್ಲಿ ರಸೀದಿ ಪುಸ್ತಕವನ್ನು ತೆಗೆದುಕೊಳ್ಳಲಿಲ್ಲ. ಬೇರೆ ರಸೀದಿ ಪುಸ್ತಕವನ್ನು ತೆಗೆದುಕೊಂಡು ನಾಲ್ಕು ನೂರು ಜನರ ಶೇರು ಸಂಗ್ರಹಣವನ್ನು ಏನು ಮಾಡಿದ್ದರು. ಆ ಶೇರುದಾರರನ್ನು ಕೂಡ ನಿಮ್ಮ ಬ್ಯಾಂಕಿಗೆ ತೆಗೆದುಕೊಳ್ಳಬೇಕೆಂದು ಆದೇಶ ಮಾಡಿ ನೋಂದಣಿ ಮಾಡಿ ಕಳುಹಿಸಿದರು. ಅದರ ವಿರುದ್ಧ, ಮಹಿಳೆಯರು ಹೈಕೋರ್ಟಿಗೆ ಹೋದರು. ಇವರು ಹೈಕೋರ್ಟ್‌ಗೆ ಹೋಗಿ ಬೇನಾಮಿ ಎಂದು ಸ್ಟೇ ತೆಗೆದುಕೊಂಡು ಬಂದರು. ಅವರನ್ನು ಸೇರಿಸಿಕೊಳ್ಳಬೇಡಿ ಎಂದು ಆಯಿತು. ಇಷ್ಟು ಆದಮೇಲೆ ಜಾಯಿಂಟ್ ರಿಜಿಸ್ಟ್ರಾರ್‌ರವರು ಆದೇಶದಲ್ಲಿ ದಿ:28-7-97ರಲ್ಲಿ ಹೇಳಿದರು. ನೋಂದಣಿ ಮಾಡಿ ಮೂವತ್ತು ದಿವಸಗಳೊಳಗೆ ಜನರಲ್‌ಬಾಡಿ ಮೀಟಿಂಗ್ ಅನ್ನು ಕರೆದು ಮಾಡಬೇಕೆಂದು ಹೇಳಿದರು. ಅವರ ಆದೇಶದ ರೀತ್ಯಾ ದಿ:30-8-97ರಲ್ಲಿ ಹಾಸನ ಜಿಲ್ಲೆಯ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಸರ್ವಸದಸ್ಯರ ಸಭೆಯನ್ನು ಕರೆಯಲು ಕ್ರಮ ಕೈಗೊಂಡರು. ಆ ದಿನ ಅದು ಬೆಳಗಿನ ವೇಳೆಯಾಗಿದ್ದು ಅರ್ಧಂಬರ್ಧ ಆಡಿಗೆಯಾಗಿದ್ದು ಮಹಿಳೆಯರು ವಿವಿಧ ತಾಲ್ಲೂಕುಗಳಿಂದ ಬರುತ್ತಾ ಇದ್ದಾರೆ, ಆ ಸಂದರ್ಭದಲ್ಲಿ ನೀವು 144ನೇ ಸೆಕ್ಷನ್ ಜಾರಿಮಾಡಿ ಆ ಸರ್ವ ಸದಸ್ಯರ ಸಭೆಯನ್ನು ತಡೆಯುವಂಥಾದ್ದಕ್ಕೆ ಹಾಸನ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಬಿದ್ದು ಹೋಗಿತ್ತೇ? ನೀವು ಹೇಳಿಬಿಡಿ ಅಲ್ಲಿ ಕಾನೂನು ಸುವ್ಯವಸ್ಥೆ ಬಿದ್ದುಹೋಗಿತ್ತು ಎಂದು, ಯಾರು ಸರ್ವಸದಸ್ಯರ ಸಭೆಯನ್ನು ನಡೆಸುವಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡುತ್ತಿರಲಿಲ್ಲ ಅವರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ನೀವು ಅಲ್ಲಿ ಸರ್ವಸದಸ್ಯರ ಸಭೆಯನ್ನು ನಡೆಸುವಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗಿತ್ತು. ಮೊದಲಿನಿಂದಲೂ ಹೇಮಾವತಿ ಮಹಿಳಾ ಸಹಕಾರ ಸಂಘದ ಬ್ಯಾಂಕ್ ಸ್ಥಾಪನೆ ಆಗಬಾರದೆಂದು ಸರ್ಕಾರದ ಉದ್ದೇಶವಿತ್ತು. ಆದುದರಿಂದ, ಅಲ್ಲಿ ಸರ್ವಸದಸ್ಯರ ಸಭೆಯನ್ನು ನಡೆಯದಂತೆ ಕ್ರಮ ಕೈಗೊಂಡಿರುವಂಥಾದ್ದು ನಿಜಕ್ಕೂ ಕೂಡ ಬಹಳ ವಿಷಾದನೀಯವಾದ ವಿಷಯವಾಗಿದೆ. ಹಾಸನ ಜಿಲ್ಲೆ ವಂಶಾಡಳಿತದ ಬೇಗುದಿಯಲ್ಲಿ ಬೇಯುತ್ತಿದೆ. ಅಲ್ಲಿ ಪ್ರಜಾಪ್ರಭುತ್ವವಿಲ್ಲ, ಸರ್ವಾಧಿಕಾರವಿದೆ ಎನ್ನುವುದಕ್ಕೆ ಇವೆಲ್ಲಾ ಸಾಕ್ಷಿಯಾಗಿದೆ. ಆದುದರಿಂದ, ದಯಮಾಡಿ ಇವತ್ತು ಅಲ್ಲಿ ಏನು ನ್ಯಾಯಯುತವಾಗಿ ನಡೆಯುತ್ತಿದ್ದಂತಹ ಮಹಿಳಾ ಸಹಕಾರ ಬ್ಯಾಂಕ್‌ನ ಸರ್ವಸದಸ್ಯರ ಸಭೆಯನ್ನು ನಡೆಯದ ರೀತಿಯಲ್ಲಿ ಅಲ್ಲಿ ತಡೆ ಮಾಡಿ ಆ ಹೆಣ್ಣು ಮಕ್ಕಳು ಬೀದಿಗೆ ಬಂದು ಸರ್ವಸದಸ್ಯರ ಸಭೆಯನ್ನು ನಡೆಸಿ ಇವತ್ತು ನಡವಳಿಕೆಯನ್ನು ಮಾಡಿದ್ದಾರೆ. ಆ ಸಭೆ ಅದನ್ನೇ ಅಧಿಕೃತ ಕಲಾಪವೆಂದು ಪರಿಗಣಿಸಿ ಆ ಸಂಘವನ್ನು ನೋಂದಣಿ ಮಾಡಲು ಸೂಕ್ತವಾದಂತಹ ಆದೇಶವನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

+ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರುಗಳು ಮಾತನಾಡಿ ಹೇಮಾವತಿ ಮಹಿಳಾ ಸಹಕಾರಿ ಬ್ಯಾಂಕ್‌ನ ಸರ್ವಸದಸ್ಯರ ಸಭೆ ನಡೆಯುವಂತಹ ಸಂದರ್ಭದಲ್ಲಿ ಆದಂತಹ ಆತಂಕದ ಬಗ್ಗೆ ನಾವು ಮಾತನಾಡುತ್ತಿದ್ದೇವೆ.

ಈ ವಿಚಾರವಾಗಿ ನಾನು ಒಂದೇ ಒಂದು ವಿಚಾರವನ್ನು ಪ್ರಮುಖವಾಗಿ ಹೇಳುವುದಕ್ಕಿಚ್ಛಿಸುತ್ತೇನೆ. ಈಗಾಗಲೇ ಸೂಚ್ಯವಾಗಿ ತಾವು ಹೇಳಿದ್ದೀರಿ, ಆದುದರಿಂದ, ನಾನು ಹೇಳಿರುವುದನ್ನೇ ಹೇಳುವಂಥಾದ್ದು ಬೇಡ. ಈ ಸಭೆ ಬೆಳಿಗ್ಗೆ ಹತ್ತು ಗಂಟೆಗೆ ನಡೆಯುವಂತಹ ಸಂದರ್ಭದಲ್ಲಿ ಇಡೀ ಜಿಲ್ಲೆಯ ಎಲ್ಲಾ ಪೋಲೀಸ್ ಸ್ಟೇಷನ್ ಪೋಲೀಸ್ ಅಧಿಕಾರಿಗಳು ಬರುವಂತಹ ಅವಶ್ಯಕತೆ ಏನಿತ್ತು. ಅಲ್ಲಿ ಪ್ರಾರಂಭದಲ್ಲಿ ಜನರು ಸೇರಿದಂಥಾದ್ದು30-40ರಷ್ಟು ಇತ್ತು, ಒಟ್ಟಾರೆ ಎರಡು ಕಡೆಯವರು ಅಲ್ಲಿದ್ದರು. ಆ ಪೊಲೀಸರ ವರ್ತನೆ ನೋಡಿ ಈ ಗೊಂದಲವಾಗುವುದಕ್ಕೆ ಕಾರಣ ಯಾರು ಎಂಬುದನ್ನು ನಾನು ಹೇಳುತ್ತೇನೆ. ಶ್ರೀ ವೆಂಕಟೇಶಮೂರ್ತಿ ಎನ್ನುವಂಥ ಒಬ್ಬ ಪತ್ರಿಕಾ ಸಂಪಾದಕ ಇವರು ಪೋಲೀಸ್‌ನವರ ವರ್ತನೆಯನ್ನು ನೋಡಿ ಒಂದೇ ಒಂದು ಮಾತನ್ನು ಹೇಳಿದನು. ಇವರ ಎದುರಿಗೆ ಒಂದು ಸಭೆಯನ್ನು ಮಾಡುವುದಕ್ಕೆ ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯವಿಲ್ಲದ ಮಟ್ಟಕ್ಕೆ ಬಂದು ಹೋಯಿತಲ್ಲಾ ಎಂದು ಅವನ ಅಭಿಪ್ರಾಯವನ್ನು ಸೂಚಿಸಿದನು. ಅವರ ಮೇಲೆ ಹೊಳೆನರಸಿಪುರದ ಸಬ್ ಇನ್‌ಸ್ಪೆಕ್ಟರ್‌ರವರು ಕೈ ಮಾಡಿದರು. ಆಗ ಗಲಾಟೆಯಾಗಿ, ಪ್ರತಿಭಟನೆಯಾಗುವಂಥಾದ್ದಕ್ಕೆ, ಬೀದಿಯಲ್ಲಿ ಮೆರವಣಿಗೆಯಾಗುವಂಥಾದ್ದಕ್ಕೆ ಕಾರಣ ಯಾರು? ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅಲ್ಲಿ ಯಾವ ಮಹಿಳೆಯರು ಏನು ಮಾಡುವುದಕ್ಕೆ ಹೋಗಲಿಲ್ಲ, ಅವರು ಅದನ್ನು ಗಮನಿಸಿದರು, ನಡೆದಂತಹ ನಡವಳಿಕೆಯನ್ನು ನೋಡಿ ಅವರು ಹೋಗಬೇಕೆಂದು ಇರುವಂತಹ ಸಂದರ್ಭದಲ್ಲಿ ಒಬ್ಬ ಪತ್ರಕರ್ತ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ಅಲ್ಲಿ ವ್ಯಕ್ತಿ ಸ್ವಾತಂತ್ರ್ಯವಿಲ್ಲವೆಂಬ ಅವನ ಅಭಿಪ್ರಾಯವನ್ನು ಆ ಪೊಲೀಸ್ ನವರ ಎದುರು ಹೇಳಿದಾಗ ಹೊಳೆನರಸಿಪುರದ ಸಬ್ ಇನ್‌ಸ್ಪೆಕ್ಟರ್‌ರವರು ಅವರ ಮೇಲೆ ಕೈ ಮಾಡಿದರು, ಆಗ ಗೊಂದಲ ಪ್ರಾರಂಭವಾಯಿತು. ಆಗ ಅಲ್ಲಿದ್ದಂತಹ ಜನರು ಪೋಲೀಸ್‌ನವರ ಮೇಲೆ ನುಗ್ಗಿದರು. ಅಲ್ಲಿ ಯಾವುದೇ ಪಕ್ಷದ ವ್ಯಕ್ತಿ ಎಂಬ ಪ್ರಶ್ನೆ ನಿರ್ದಿಷ್ಟವಾಗಿ ಇರಲಿಲ್ಲ. ಅಲ್ಲಿ ಮಹಿಳೆಯರು ಎರಡು ಕಡೆಯವರು ಗುಂಪು ಇದ್ದು, ಅವರವರಲ್ಲೆ ಮಾತುಕತೆಗಳು ನಡೆಯುತ್ತಾ ಇತ್ತು. ಅವರು ಎದ್ದು ಹೋಗುವಂತಹ ಸಂದರ್ಭದಲ್ಲಿ ಗೊಂದಲ ಪ್ರಾರಂಭವಾಯಿತು. ಇಷ್ಟರಲ್ಲೆ ತಾವು ಯೋಚನೆ ಮಾಡಿ ಆ ಜಿಲ್ಲೆಯಲ್ಲಿ ಕಾನೂನಿನ ಸುವ್ಯವಸ್ಥೆ ಎನ್ನುವುದು ಏನಾದರೂ ಇದೆಯಾ? ಇದು ನಡೆದಿರುವಂಥದ್ದರ ಬಗ್ಗೆ ಎನ್‌ಕ್ವೈರಿ ಆಗಲಿ, ಈ ಗೊಂದಲ ಎಲ್ಲಿಂದ ಪ್ರಾರಂಭವಾಯಿತು ಎಂಬುದು ತಿಳಿಯಬೇಕು. ಅಲ್ಲಿ ಆ ಪತ್ರಕರ್ತ ಯಾವುದೇ ಪಕ್ಷಕ್ಕೆ ಸೇರಿದಂತಹ ವ್ಯಕ್ತಿಯಲ್ಲ, ಅವನು ಒಬ್ಬ ಆ ಜಿಲ್ಲೆಯ ಪ್ರಜೆ, ಇರುವುದನ್ನು ನೇರವಾಗಿ ಪತ್ರಿಕೆಯಲ್ಲಿ ಬರೆಯುತ್ತಿದ್ದವನು. ಅಂದಮೇಲೆ ಪೋಲೀಸ್ ವ್ಯವಸ್ಥೆ ಆ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ನಡೆಯುತ್ತಿದೆ? ಅಲ್ಲಿ ಕಾನೂನಿನ ವ್ಯವಸ್ಥೆ ಎನ್ನುವಂಥಾದ್ದು ಇದೆಯಾ? ಆ ಜಿಲ್ಲೆಯಲ್ಲಿ ಒಬ್ಬ ಸಾಮಾನ್ಯ ಪ್ರಜೆ ನಿರ್ಭೀತಿಯಿಂದ ಕೆಲಸ ಮಾಡಲು ಸಾಧ್ಯವಿದೆಯಾ? ಅಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ಕನಿಷ್ಟ ಐದುನೂರು ಜನ ಪೋಲೀಸರು ಇದ್ದಾರೆ. ಇದನ್ನು ನೀವು ವಿಡಿಯೋ ಕ್ಯಾಸೆಟ್ ನೋಡಿದರೆ ಮಿಲಿಟರಿಯವರು ಬಂದ ಹಾಗೆ ಇದೆ. ಅಲ್ಲಿ ಅದನ್ನು ಮಾಡಬಾರದೆಂಬ ತೀರ್ಮಾನಕ್ಕೆ ಬಂದಿದ್ದರು. ಅದಕ್ಕೆ ಚಾಲನೆಯನ್ನು ಕೊಟ್ಟಂಥವನು ಆ ಪತ್ರಕರ್ತ. ಅವನು ಜನರನ್ನು ಏನು ಹೇಡಿಗಳ ಹಾಗೆ ಇದ್ದೀರಿ ಎಂದು ಹುರಿದುಂಬಿಸಿದನು. ಇಲ್ಲಿ ಪ್ರಜಾಪ್ರಭುತ್ವವೆಂಬುದು ಇಲ್ಲ, ಇಲ್ಲಿ ಡಿಕ್ಟೇಟರ್‌ಶಿಪ್ ನಡೆಯುತ್ತಾ ಇದೆ. ಇದು ವಂಶಪಾರಂಪರ್ಯದ ರಾಜಕಾರಣ ಆಗಿದೆ, ಉಸ್ತುವಾರಿ ಸಚಿವರ ಹಸ್ತಕ್ಷೇಪ

ಹಿಡಿತ, ನಾಚಿಕೆಯಾಗುವುದಿಲ್ಲವೆಂಬ ಮಾತನ್ನು ಹೇಳಿದ ಮೇಲೆ ಜನರು ಪೋಲೀಸರ ವಿರುದ್ಧವಾಗಿ ನುಗ್ಗಿದರು, ಮತ್ತೇನನ್ನು ಕೇಳುವುದಕ್ಕೆ ಅಲ್ಲಿ ಜನರು ಇರಲಿಲ್ಲ. ಅಲ್ಲಿ ಎಷ್ಟರಮಟ್ಟಿಗೆ ಆ ಜಿಲ್ಲೆಯಲ್ಲಿ ಕೆಲವರಲ್ಲಿ ರಾಜಕಾರಣ ನಡವಳಿಕೆಯಲ್ಲಿದೆ, ಆ ಜನರಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿದೆ. ತಾವು ಆ ಕ್ಯಾಸೆಟ್ ಅನ್ನು ನೋಡಿ ತಾವು ಕೆಲವು ಸಾರಿ ತಮ್ಮ ಚೇಂಬರ್‌ನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಹೋಗಿ, ನಿಮ್ಮ ಜಿಲ್ಲೆಯಲ್ಲಿ ಇಬ್ಬರೂ ಶಾಸಕರು ಇದ್ದೀರಿ, ಎಂದು ಹೇಳಿದ್ದೀರಿ. ತಾವು ಸಹ ನಮಗೆ ಸಾಕಷ್ಟು ಮಾರ್ಗದರ್ಶನವನ್ನು ಮಾಡಿದ್ದೀರಿ. ಇಂತಹ ವಾತಾವರಣ ಪದೇ ಪದೇ ಸೃಷ್ಟಿಯಾಗುತ್ತಾ ಇದ್ದರೆ ಯಾವ ರೀತಿಯಲ್ಲಿ ಜನರಿಗೆ ನಾವು ನ್ಯಾಯವನ್ನು ಒದಗಿಸುವಲ್ಲಿ ಸಾಧ್ಯತೆಗಳು ಇದೆ. ಹಿಂದೆ ಸದನದಲ್ಲಿ ಈ ವಿಚಾರವಾಗಿ ನಾವು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮಂತ್ರಿಯವರು, ಫೋಟೋವನ್ನು ನೋಡಿ ನಗುತ್ತಿದ್ದಾರೆ, ಇನ್ನು ಕ್ಯಾಸೆಟ್ ನೋಡಿದರೆ ಯಾವರೀತಿಯಲ್ಲಿ ನಗುತ್ತಾರೆ ಎಂಬುದು ಗೊತ್ತಾಗುತ್ತದೆ. ಅಲ್ಲಿ ವಾತಾವರಣ ಯಾವ ಮಟ್ಟದಲ್ಲಿದೆ ಎಂಬುದು ಗೊತ್ತಾಗುತ್ತದೆ. ಇಲ್ಲಿ ನಾವು ಮಾತನಾಡುವಾಗ ಅವರಿಗೆ ಆಗುವುದಿಲ್ಲವೇನೋ ಅದಕ್ಕೆ ಪದೇ ಪದೇ ಮಾತನಾಡುತ್ತಾರೆ, ಟೀಕೆ ಮಾಡುತ್ತಾರೆ, ಆ ರೀತಿಯ ಭಾವನೆ ನಮಗೆ ಖಂಡಿತವಾಗಿ ಇಲ್ಲ. ಆ ಜಿಲ್ಲೆಯು ಅಭಿವೃದ್ಧಿಯಾಗಬೇಕೆಂಬ ಕಳಕಳಿ ಇದೆ, ಮತ್ತು ಅಭಿವೃದ್ಧಿಯ ಬಗ್ಗೆ ನಮಗೆ ಹೆಚ್ಚಿನ ಆಸಕ್ತಿ ಇದೆ. ಆದರೆ, ಈ ರೀತಿಯ ವಾತಾವರಣ ಸೃಷ್ಟಿ ಮಾಡಿದಾಗ ಅಷ್ಟೇ ರಕ್ತ ಕುದಿಯುತ್ತದೆ. ನಮ್ಮನ್ನು ನಂಬಿರುವಂತಹ ಜನರಿಗೆ ನೆಮ್ಮದಿ ಇಲ್ಲದಂಥ ವಾತಾವರಣ ಸೃಷ್ಟಿಯಾಗಿದೆಯಲ್ಲಾ, ಇದರಿಂದ ನಮಗೆ ಮೈಯಲ್ಲಿ ಬೆವರು ಬರುತ್ತದೆ. ಇದನ್ನು ನಾನು ಪದೇ ಪದೇ ಹೇಳಿದ್ದೇನೆ. ನಾನು ಮಹಿಳಾ ಬ್ಯಾಂಕ್‌ನ ವಿಚಾರವನ್ನು ಅವರ ಹತ್ತಿರ ಪ್ರಸ್ತಾಪ ಮಾಡಿದೆ. ಅದರಲ್ಲಿ ನ್ಯೂನ್ಯತೆಗಳು ಇದ್ದರೆ ಬಿಟ್ಟು ಬಿಡಿ, ಸಂಬಂಧಪಟ್ಟಂತಹ ಅಧಿಕಾರಿಗಳು ಅದನ್ನು ಮೊದಲೇ ಹೇಳಿ, ವಾತಾವರಣವನ್ನು ತಿಳಿಗೊಳಿಸುವಂತಹ ವ್ಯವಸ್ಥೆಯನ್ನು ಮಾಡಬಹುದಾಗಿತ್ತು ಬೆಳಿಗ್ಗೆ 10ಗಂಟೆಗೆ ಸಭೆ ನಡೆಯುವಂತಹ ಜಾಗಕ್ಕೆ ಬೀಗವನ್ನು ಹಾಕಿ ಸ್ಥಳದಲ್ಲಿ ಪೋಲೀಸರನ್ನು ನಿಲ್ಲಿಸಿದರೆ ಹೇಗೆ? ನಾನು ಬೇರೆ ಲೋಪದೋಷಗಳ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಅದಕ್ಕೆ ಮಂತ್ರಿಗಳು ಬೇರೆ ಉತ್ತರವನ್ನು ಹೇಳಬಹುದು. ಅವರು ಮಾಡಿರುವಂತಹ ಅಜೆಂಡಾ ಸರಿಯಾಗಿ ಇರಲಿಲ್ಲ, ಅವರು ನಿಗದಿ ಮಾಡಿದಂತಹ ಸ್ಥಳ ಸರಿಯಾಗಿರಲಿಲ್ಲವೆನ್ನುವಂಥಾದ್ದು ಅದೆಲ್ಲಾ ಬೇರೆ ವಿಚಾರವಾಗುತ್ತದೆ. ಆದರೆ ಇಲ್ಲಿ ತಪ್ಪು ಸರಿ ಎನ್ನುವಂಥಾದ್ದಕ್ಕೆ ಅಲ್ಲಿ ಅಧಿಕಾರಿಗಳು ಇದ್ದಾರೆ, ಕಾನೂನು ಇದೆ, ಅದನ್ನು ತಾವು ಮಾಡಿ. ಅದರ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ. ಆ ಜಿಲ್ಲೆಯಲ್ಲಿ ಕಾನೂನು ಇದೆಯಾ? ಈ ರೀತಿಯಾಗಿ ಡಿಕ್ಟೇಟರ್ ಶಿಪ್ ನಡೆಯುವುದಾದರೆ ಯಾವ ರೀತಿಯಾಗಿ ಜನರು ನೆಮ್ಮದಿಯಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ತೋರಿಕೊಳ್ಳುವಂಥಾದ್ದಕ್ಕೆ ಸಾಧ್ಯತೆ ಇದೆ. ಮಾನ್ಯ ರಾಮಸ್ವಾಮಿಯವರು ಹದಿನೈದುದಿವಸಗಳ ಹಿಂದೆ ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಾನು ಅಧಿಕಾರಿಗಳ ಜೊತೆಗೆ ಪ್ರಾಸ್ತಾಪ ಮಾಡಿದಾಗ ಅವರು ಏನು ಹೇಳಿದರೆಂದರೆ ಅವರು ಅನಿವಾರ್ಯ ಆಗಿದೆ, ದಯವಿಟ್ಟು ಕ್ಷಮಿಸಿ ಎನ್ನುವ ಮಾತನ್ನು ಹೇಳಿದರು. ಅವರ ಹೆಸರುಗಳನ್ನು ಹೇಳಬಾರದು, ಹೇಳಿದರೆ ಅವರಿಗೆ ತೊಂದರೆಯಾಗುತ್ತದೆ. ನಾವು ಅಧಿಕಾರಿಗಳೊಡನೆ ಕುಳಿತು ಏನಾದರೂ ವ್ಯವಸ್ಥೆಯನ್ನು ಮಾಡಿದರೆ ಅವರಿಗೆ ಆಗಲೇ ವಾರ್ನಿಂಗ್ ಬರುತ್ತದೆ. ಒಮ್ಮೆ

ಅಸಿಸ್ಟೆಂಟ್ ಕಮೀಷನರ್‌ರವರ ಜೊತೆಗೆ ಮಾತನಾಡಿದ್ದಕ್ಕೆ ಪ್ರಜಾಪ್ರಭುತ್ವದಲ್ಲಿ ಧರಣಿ ಸತ್ಯಾಗ್ರಹಗಳು ನಡೆಯುತ್ತದೆ. ಒಮ್ಮೆ ಅಸಿಸ್ಟೆಂಟ್ ಕಮಿಷನರ್ ಹೌದು ನಾನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಕ್ಕೆ ಅವರಿಗೆ ಕರೆದು ವಾರ್ನಿಂಗ್ ಕೊಡುತ್ತಾರೆ. ಅಧಿಕಾರಿಗಳು ಸತ್ಯವನ್ನು ಹೇಳಿದರೂ ಅವರಿಗೂ ಅಷ್ಟೆ ಪರಿಸ್ಥಿತಿ ಕಷ್ಟ ಇರುತ್ತದೆ. ಇವರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲಾ ವಿಚಾರಗಳಲ್ಲೂ ನಾನು ಅಧಿಕಾರಿಗಳದ್ದು ತಪ್ಪು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಅಧಿಕಾರಿಗಳು ಪ್ರಾಮಾಣಿಕರು, ದಕ್ಷರು ಇದ್ದಾರೆ. ಅವರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕೆಂಬ ಭಾವನೆ ಮತ್ತು ಮನಸ್ಸು, ಕಳಕಳಿಯೂ ಇದೆ. ಆದರೆ, ವಾತಾವರಣದಿಂದ ಅಧಿಕಾರಿಗಳು ನಿಷ್ಪಕ್ಷಪಾತದಿಂದ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ವಾತಾರಣವನ್ನು ತಿಳಿಗೊಳಿಸುವಂಥಾದ್ದಕ್ಕೆ ಈ ಸದನದಲ್ಲಿ ಏನಾದರೂ ಅವಕಾಶವಿದೆಯಾ? ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಕಳಕಳಿಯಿಂದ ನಾನು ಹೇಳುವಂಥ ವಿಷಯದಲ್ಲಿ ಸತ್ಯ, ಅಸತ್ಯವನ್ನು ಪರಿಶೀಲನೆ ಮಾಡಿದರೆ ಸಾಕು. ನಾವು ಎಲ್ಲದಕ್ಕೂ ಸದಸ್ಯರನ್ನಾಗಿ ಮಾಡಿ ಎಂದು ಹೇಳಿಲ್ಲ, ನಾವು ಕೇಳಿದೆವು ಮಾಡಲಿಲ್ಲ, ಅವಕಾಶವಿದ್ದಾಗ ನಾವು ಮಾಡಿಕೊಳ್ಳುತ್ತೇವೆ. ಆದರೆ ಈ ರೀತಿಯಾಗಿ ನಡವಳಿಕೆಯಂತೂ ನಾವು ಮಾಡುವುದಿಲ್ಲ. ನಾನು ಈ ಸದನದಲ್ಲಿ ನಡೆದಿರುವ ಬಗ್ಗೆ ನಿಮಗೂ ಒಂದು ಪತ್ರವನ್ನು ಕೊಟ್ಟಿದ್ದೇನೆ. ಯಾವುದೇ ಸಮಿತಿಗ್ಳನ್ನು ಮಾಡುವಂತಹ ಅವಕಾಶಗಳು ವಿರೋಧಪಕ್ಷದವರಿಗೆ ಇಲ್ಲ ಸಭೆಗಳನ್ನು ಮಾಡುವಂತಹ ಕಾಲದಲ್ಲಿ ತಾವು ನಡವಳಿಕೆಗಳನ್ನು ನೋಡಬೇಕು. ಒಬ್ಬ ಮಂತ್ರಿಗಳು ಸದನದಲ್ಲಿ ನಡೆದುಕೊಳ್ಳತಕ್ಕಂಥ ನಡವಳಿಕೆಯನ್ನು ನೋಡಿ ಅಧಿಕಾರಿಗಳು ನಗಾಡುತ್ತಿರುತ್ತಾರೆ, ಆಮೇಲೆ ಹೇಳುತ್ತಿರುತ್ತಾರೆ. ಬಹಳಷ್ಟು ಈ ರೀತಿಯ ನಡವಳಿಕೆಗಳು ಈ ಜಿಲ್ಲೆಯಲ್ಲಿ ನಡೆಯುತ್ತಿದೆ, ಬಹುಶಃ ಬಹಳಷ್ಟು ಮಂತ್ರಿಗಳಿಗೆ ಅರಿವಾಗಿದೆ, ನಾವು ಅವರ ಹತ್ತಿರ ಹೇಳಿದ್ದೇವೆ. ಅವರು ಹೇಗೆ ಹಿಡಿದುಕೊಂಡು ಹೇಳುತ್ತಾರೆಂದರೆ, ಏನಪ್ಪ ಮಾಡೋಣ ಎನ್ನುತ್ತಾರೆ. ಬಹಳಷ್ಟು ಮಂತ್ರಿಗಳಿಗೆ ಗೊತ್ತಿದೆ, ಮುಗುಂ ಆಗಿ ಹೇಳುತ್ತಾರೆ, ಆದರೆ ನಮಗೂ ಅರ್ಥವಾಗುತ್ತದೆ, ನಾವು ತಡೆದುಕೊಂಡು ಬಹಳ ತಾಳ್ಮೆಯಿಂದ, ಸೌಜನ್ಯದಿಂದ ನಡೆದುಕೊಂಡು ಬಂದಿದ್ದೇವೆ. ಅಧ್ಯಕ್ಷರೆ, ಈಗ ನಾನು ಎರಡೇ ವಿಚಾರವನ್ನು ಹೇಳುತ್ತೇನೆ. ಒಂದು ಆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಇದೆಯೋ ಎನ್ನುವುದು ತೀರ್ಮಾನವಾಗಬೇಕು, ಎರಡನೆಯದು ಅಲ್ಲೇನು ಸಭೆ ನಡೆದಿದೆ, ಅದು ಅಧಿಕೃತ ಸಭೆ ಎಂದು ಮಂತ್ರಿಗಳು ಪ್ರಕಟಣೆ ಮಾಡಬೇಕು. ಮೊನ್ನೆ ಒಂದು ಚುನಾವಣೆ ನಡೆದ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡಿದರು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಪ್ಪಿಕೊಂಡು ಆ ಚುನಾವಣೆ ಪ್ರಜಾಪ್ರಭುತ್ವದಲ್ಲಿ ಕಾನೂನಿನ ಪ್ರಕಾರ ನಡೆಯಲಿ ಎನ್ನುವ ಮಾತನ್ನು ಹೇಳಿದರು, ಅದು ಈ ಸದನದಲ್ಲಿ ಗೌರವವನ್ನು ಹೆಚ್ಚಿಸಿತು. ಆ ರೀತಿ ನಮ್ಮಲ್ಲಿ ಭಾವನೆ ಬರಬೇಕು. ನಿಷ್ಪಕ್ಷಪಾತವಾಗಿ ನಡೆಯಲಿ ಯಾರದಾದರೂ ಆಗಲಿ. ಇನ್ನೊಂದು ಮಾಡುವುದಕ್ಕೆ ಅವಕಾಶವಿದೆ, ಆ ಅವಕಾಶವನ್ನು ಕಲ್ಪಿಸಿ ಕೊಡತಕ್ಕಂಥ ಮನಸ್ಸು ನಮಗೆ ಬರಬೇಕು ಎನ್ನುವುದು ನನ್ನ ಭಾವನೆ. ಆ ರೀತಿಯಲ್ಲಿ ಬಹುಶಃ ಮಂತ್ರಿಗಳು ನಡೆದುಕೊಳ್ಳತಕ್ಕಂಥದ್ದು ಎರಡನೆಯದು. ಅಧಿಕಾರಿಗಳೇನಾದರೂ ತಪ್ಪು ಮಾಡಿದ್ದರೆ, ನಾನು ಕ್ರಮ ತೆಗೆದುಕೊಳ್ಳಿ ಎಂದು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಪ್ರಸ್ತಾಪ ಮಾಡಿ

ಅವರು ಯಾವುದೋ ಒಂದು ಇಕ್ಕಟ್ಟಿಗೆ ಮಾಡಿರುತ್ತಾರೆಂದು ಹೇಳಿಬಿಟ್ಟಿದ್ದೇನೆ. ಆದರೆ ಮಂತ್ರಿಗಳು ತೀರ್ಮಾನವನ್ನು ತೆಗೆದುಕೊಂಡು, ನಡೆದಿರುವ ಸಭೆ ಸರಿ ಎಂದು, ಕಾನೂನು ಪ್ರಕಾರ ಅಧ್ಯಕ್ಷರನ್ನು ಘೋಷಣೆ ಮಾಡಬೇಕು ಹಾಗೂ ಕಾನೂನು ಸುವ್ಯವಸ್ಥೆ ಬಗ್ಗೆ ಗಮನಹರಿಸಬೇಕು ಎನ್ನುವ ಎರಡು ವಿಚಾರಗಳ ಬಗ್ಗೆ ಈ ಸದನದಲ್ಲಿ ಒತ್ತಾಯ ಮಾಡಿ, ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶಿವಪ್ಪನವರೆ, ಹೆಚ್ಚು ಸಮಯ ತೆಗೆದುಕೊಳ್ಳದೆ ಮಾತನಾಡಿ ಮುಗಿಸಿ.

+ ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರಿನಿಂದ ಊರಿಗೆ ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ಡಿ.ಸಿ. ಕಛೇರಿಯ ಮುಂದುಗಡೆ ಭಾರಿ ಜನ ಮತ್ತು ರಿಸರ್ವ್ ಪೋಲಿಸ್ ಸೇರಿದ್ದನ್ನು ನಾನು ಕಂಡೆ. ಏನೋ ಗೊಂದಲವಿರಬೇಕೆಂದು ನಾನು ಅಲ್ಲಿ ಇಳಿದೆ. ಅಲ್ಲಿ ವಿಚಾರಿಸಿದಾಗ, ಅಲ್ಲಿ ನಡೆದಿದ್ದರ ಬಗ್ಗೆ ನಮ್ಮ ಹಿರಿಯರು ಏನು ಮಾತನಾಡಿದರು ಆ ವಿಚಾರವನ್ನು ಮಹಿಳೆಯರು ಹೇಳಿದ್ದನ್ನು ನಾನು ಕೇಳಿ ದಿಗ್ಭ್ರಾಂತನಾದೆ, ನಾವೇನು ಪ್ರಜಾಪ್ರಭುತ್ವದಲ್ಲಿದ್ದೇವೆಯೋ ಎನ್ನುವ ಒಂದು ಅನುಮಾನ ಬಂತು. ಸಾಕಷ್ಟು ಪ್ರಸ್ತಾಪ ಮಾಡಿರುವುದರಿಂದ ಈ ವಿಚಾರವನ್ನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಕೇವಲ ಈ ಒಂದು ಚುನಾವಣೆ ಮಾತ್ರವಲ್ಲ, ಇವತ್ತು ಹಾಸನ ಜಿಲ್ಲೆಯಲ್ಲಿ ನಡೆದಂಥ ಎಲ್ಲಾ ಚುನಾವಣೆಗಳಲ್ಲಿ, ಡಿಸಿಸಿ ಬ್ಯಾಂಕಿಗೆ ನಡೆಯತಕ್ಕಂಥ ಚುನಾವಣೆಗಳಿರಬಹುದು, ಪ್ರತಿಯೊಂದು ಚುನಾವಣೆಗೂ ಕೂಡ ಇದೇ ರೀತಿ ಪೋಲಿಸಿನ ಒಂದು ಶಕ್ತಿಯಿಂದ ನಡೆದಿದೆ. ಮೊನ್ನೆ ಡಿಸಿಸಿ ಬ್ಯಾಂಕಿಗೆ ನಮ್ಮಲ್ಲಿ ಚುನಾವಣೆ ನಡೆಯಿತು. ಕೆಂಚಮ್ಮನ ಹೊಸಕೋಟೆ ಎನ್ನತಕ್ಕಂಥ ಒಂದು ಹಳ್ಳಿಯಲ್ಲೂ ಕೂಡ 144ನೇ ಸೆಕ್ಷನ್ ಜಾರಿಯಾಗಿ ಚುನಾವಣೆ ಇಲ್ಲದ ಹಾಗೆ ಮಾಡಿ ಅವಿರೋಧವಾಗಿ ಆಯ್ಕೆಯಾದರೆಂದು ಅವರು ಘೋಷಣೆ ಮಾಡಿದರು. ಇದೇರೀತಿ ರಾಯರಕೊಪ್ಪಲಿಗೆ ಸಂಬಂಧಿಸಿದ ಕುಂದೂರಿನಲ್ಲಿ ಚುನಾವಣೆಯಾಗಲಿಲ್ಲ, ಅಲ್ಲೂ ರಿಸರ್ವ್ ಪೋಲಿಸ್ ಇತ್ತು. ಹೀಗೆ ಪ್ರತಿಯೊಂದು ಸೊಸೈಟಿ ಚುನಾವಣೆಯಲ್ಲೂ ಕೂಡ ರಿಸರ್ವ್ ಪೋಲಿಸ್ ಇಟ್ಟುಕೊಂಡು ಚುನಾವಣೆಯನ್ನು ನಡೆಸತಕ್ಕಂಥ ಪರಿಸ್ಥಿತಿ ಹಳ್ಳಿ ಹಳ್ಳಿಗೆ ತಲುಪಿರತಕ್ಕಂಥದ್ದು ಬಹುಶಃ ಹಿಂದೆಂದು ನಾವು ಕೇಳಿರಲಿಲ್ಲ, ಬಹುಶಃ ಮುಂದೆ ನೋಡುವುದಿಲ್ಲವೆಂದು ನನ್ನ ಭಾವನೆ. ಮತ್ತು ನಮ್ಮ ಸಹಕಾರ ಮಂತ್ರಿಗಳು ಏತಕ್ಕೆ ಹೀಗಾದರೆಂದು ನನಗೆ ಅನುಮಾನವಿದೆ. ಮಾನ್ಯ ಅಧ್ಯಕ್ಷರೆ, ನಾವು ಸದನದಲ್ಲಿ ಏನಾದರೂ ಮಾತನಾಡಿದರೆ ಅಥವಾ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಸದನದಲ್ಲಿ ಅದಕ್ಕೆ ಉತ್ತರ ಸಿಕ್ಕರೆ ಅದೊಂದು ರೀತಿ ಸರ್ಕಾರಿ ಆಜ್ಞೆಯಾಗುತ್ತದೆ, ಸರ್ಕಾರ ಅದಕ್ಕೆ ಕಟಿಬದ್ಧವಾಗಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಫೆಬ್ರವರಿ 21ರಲ್ಲಿ ನಾನು ಒಂದು ಸೊಸೈಟಿಯಲ್ಲಿ ಮೂವತ್ತು ನಲವತ್ತು ಲಕ್ಷ ರೂಪಾಯಿಗಳ ಅವ್ಯವಹಾರವಾಗಿರುವುದಕ್ಕೆ ಸಂಬಂಧಿಸಿದಂತೆ ಒಂದು ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ತಾವು ಕೂಡ ಅದರಲ್ಲಿ ಭಾಗವಹಿಸಿದ್ದಿರಿ, ಬಹುಶಃ ನಾನು ಹಲವಾರು ಸಂದರ್ಭಗಳಲ್ಲಿ ಹೇಳಿದ್ದೇನೆ, ಅವರು ಯಾವ ಪಕ್ಷದವರಾದರೂ ನಾನು ಅವರ ಮುಖ ನೋಡುವುದಿಲ್ಲ, ತಪ್ಪು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು

ನಮ್ಮ ಮಂತ್ರಿಗಳು ಹೇಳಿರುವುದು ಇದೆ. ಸೆಕ್ಷನ್ 64ರ ಪ್ರಕಾರ ವಿಚಾರಣೆ ಮಾಡಿದ ಮೇಲೆಯೂ ನಾವು ರದ್ದುಮಾಡಬೇಕಾಗುತ್ತದೆ, ಯಾವುದೇ ಸಂದರ್ಭದಲ್ಲಿ ಸುಮ್ಮನೆ ಹೋಗಿ ರದ್ದು ಮಾಡಿದರೆ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ, ಆ ಕಾರಣದಿಂದ ಸೆಕ್ಷನ್ 64ನ್ನು ನಾವು ಇನಿಶಿಯೇಟ್ ಮಾಡಿ ಏನ್‌ಕ್ವೈರಿ ಮಾಡಿ ಎಂದು ಅವರಿಗೆ ಕಳುಹಿಸಿದೆವು, ವಿಚಾರಣಾ ವರದಿಯೂ ಬಂತು, ದುರ್ದೈವದಿಂದ ಅವರು ಅಡಿಷನಲ್ ಚಾರ್ಜ್ ಏನಿದ್ದಾರೆ ಆ ಗ್ರೌಂಡ್ ಮೇಲೆ ಇವನಿಗೆ ಅಧಿಕಾರವಿಲ್ಲ ಎಂದು ಸ್ಟೇ ಕೊಟ್ಟಿದೆ ಅದಕ್ಕೆ ಒಬ್ಬ ಯೋಗ್ಯ ಅಧಿಕಾರಿಯನ್ನು ಹೊರಗಿನಿಂದಲೇ ಕಳುಹಿಸಿ ಅದನ್ನು ಏನ್‌ಕ್ವೈರಿ ಮಾಡಿಸಿ, ಅವನು ಯಾವ ಪಕ್ಷದವನು, ಯಾರು ಎಂದು ಮುಖ ನೋಡುವುದಿಲ್ಲ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಸ್ವಾಮಿ, ಆ ಸಮಯದಲ್ಲಿ ತಾವು ಕೂಡ ಪ್ರಶ್ನೆ ಮಾಡಿದ್ದೀರಿ, ಅವರು ಯಾವ ಪಕ್ಷದವರು ಎಂದು ಕೇಳಿದ್ದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಫೆಬ್ರವರಿ ತಿಂಗಳಲ್ಲಿ ನಡೆದದ್ದು ಇಲ್ಲಿಯವರೆಗೆ ಆಗಲಿಲ್ಲ. ನಂತರ, ಇವರು ಹೇಳಿದ ಹಾಗೆ ಮತ್ತೆ ಏನ್‌ಕ್ವೈರಿಗೆ ಕಳುಹಿಸಿದ್ದಾರೆ. ಆಮೇಲೆ ಏನು ತಪ್ಪಾಗಿದೆ ಎಂದು ಹೇಳಿದ್ದಾರೆ ಅದೇ ರೀತಿ ಏನ್‌ಕ್ವೈರಿಗೆ ಕಳುಹಿಸಿದಾಗ ಮತ್ತೆ ಅವನು ಸ್ಟೇ ತೆಗೆದುಕೊಂಡು ಬಂದಿದ್ದಾನೆ. ಅಂದ ಮೇಲೆ ಸುಮಾರು ಮೂವತ್ತು ನಲವತ್ತು ಲಕ್ಷ ರೂಪಾಯಿಗಳು ಖಂಡಿತವಾಗಿ ಈ ಸೊಸೈಟಿಗೆ ಬರುವುದಿಲ್ಲ. ಆ ವ್ಯಕ್ತಿ ಪುನಃ ಸಾಲವನ್ನು ಈ ಸಾರಿ ತೆಗೆದುಕೊಂಡಿದ್ದಾರೆ. ಅಂದ ಮೇಲೆ ಈ ಸೊಸೈಟಿ ಹಣವೆಂದರೆ, ನಮ್ಮಲ್ಲಿ ಕುಲ್ಲಾ ಮೈದಾನವೆಂದು ಹೇಳುತ್ತಾರೆ. ಯಾರು ಎಲ್ಲಿಬೇಕಾದರೂ ಹೋಗಬಹುದು, ಏನು ಬೇಕಾದರೂ ತಿನ್ನಬಹುದು ಆ ರೀತಿಯ ಒಂದು ಪರಿಸ್ಥಿತಿ ಇಲ್ಲಿ ಆಗುತ್ತಿದೆ ಬಹುಶಃ ಸಹಕಾರ ಮಂತ್ರಿಗಳು, ನಮ್ಮ ನಾಯಕರು ಹೇಳಿದ ಹಾಗೆ ಮೊದಲು ಸಹಕಾರ, ಈಚೆಗೆ ಮಂತ್ರಿಯಾದ ಮೇಲೆ ಏನಾಯಿತು ಎಂದು ಏನು ಅನುಮಾನ ಪಡುತ್ತಾರೆ, ಆ ಅನುಮಾನ ನನಗೂ ಬರುತ್ತಿದೆ, ಸಾರ್ವಜನಿಕರಲ್ಲೂ ಬರುತ್ತಿದೆ, ಇದಾಗಬಾರದು. ಆ ದಿನದ ಡಿಸಿಸಿ ಬ್ಯಾಂಕಿನ ಚುನಾವಣೆಯನ್ನು ಕೂಡ ತಾವು ರದ್ದುಪಡಿಸಬೇಕಾಗುತ್ತದೆ, ಕಾರಣ ಚುನಾವಣೆ, ಚುನಾವಣೆಯ ರೀತಿಯಲ್ಲಿ ನಡೆಯಲಿಲ್ಲ, ಪೋಲಿಸರ ಹಿಂಭಾಗದಲ್ಲಿ ನಡೆಯಿತು. ಮತ್ತೆ ಮೊನ್ನೆ ಮಹಿಳೆಯರು ಏನು ಮಾಡಿದ್ದಾರೆ, ಅದು ಒಂದು ಕೊಠಡಿಯ ಒಳಗೆ ನಡೆಯಲಿ ಕೊಠಡಿಯ ಹೊರಗೆ ನಡೆಯಲಿ, ಸಭೆ ಸಭೆಯೇ ಅಂದಮೇಲೆ ಅದಕ್ಕೆ ಮಾನ್ಯತೆ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಹಿರಿಯ ಸದಸ್ಯರೂ ಕೂಡ ಈ ಹಾಸನ ಸಹಕಾರಿ ಮಹಿಳಾ ಬ್ಯಾಂಕಿನ ಒಂದು ವಾರ್ಷಿಕ ಮಹಾಸಭೆಯ ಬಗ್ಗೆ ಮಾತನಾಡಿದ್ದಾರೆ. ಮಾತನಾಡುವಾಗ ನನ್ನ ಬಗ್ಗೆಯೂ ಕೂಡ ಮಾತನಾಡಿದ್ದಾರೆ. ಬಹುಶಃ, ಇವರು ನುಡಿದಂತೆ ನಡೆಯುತ್ತಾರೆ, ಮಾತನಾಡಿದಂತೆ ನಡೆಯುತ್ತಾರೆ ಎನ್ನುವ ಭಾವನೆ ಇಷ್ಟುದಿವಸ ನಮಗಿತ್ತು ಅದು ಈಗ ಇಲ್ಲವೆಂದು ಹೇಳಿದ್ದಾರೆ. ಬಹುಶಃ ನಾನು ಹಾಗೆ ನಡೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ತಮಗೆ ಸಂಶಯಬೇಡ, ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ನನ್ನ ಜೀವನದಲ್ಲಿ ನಡೆಸಿಕೊಂಡು ಬಂದಿದ್ದೇನೆ, ನಾನು ಏನು ನುಡಿಯುತ್ತೇನೆ ಅದರಂತೆ ನಡೆಯುತ್ತೇನೆ ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ನೀವು ಏನು

ಹೇಳಿದ್ದೀರಿ ಆ ಪ್ರಕಾರ ಎಲ್ಲಾ ಮಾಡಿಸುತ್ತಿದ್ದೇನೆ, ಕೆಲವು ಕಾಯಿದೆಯಲ್ಲಿ ತೊಡಕುಗಳಿರುತ್ತವೆ, ಸ್ವಲ್ಪ ತಡವಾಗುತ್ತದೆ, ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ. ತಮಗೆ ಗೊತ್ತಿದೆ ಬೆಂಗಳೂರು ಡಿಸಿಸಿ ಬ್ಯಾಂಕ್‌ಗೆ ಸಂಬಂಧಿಸಿದ್ದನ್ನು ಸಿಬಿಐಗೆ ಕೊಡುವುದಕ್ಕೆ ಕೂಡ ನಾನು ಹಿಂದೆಮುಂದೆ ನೋಡಲಿಲ್ಲ. ಇವತ್ತು ಯಾರನ್ನೂ ಬಿಡುವ ಪ್ರಶ್ನೆ ಇಲ್ಲ, ರಕ್ಷಣೆ ಮಾಡುವ ಪ್ರಶ್ನೆ ಇಲ್ಲ, ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಬರಬಾರದೆನ್ನುವುದರಲ್ಲಿ ನಾನು ಒಬ್ಬ. ಆ ರೀತಿಯಾಗಿ ಇವತ್ತು ಒಂದು ತಿದ್ದುಪಡಿಯನ್ನು ತಂದಿದ್ದೇನೆ, ತಮ್ಮ ಸಲಹೆಗಳೇನಿರುತ್ತವೆ, ಅವನ್ನೆಲ್ಲಾ ನಾವೆಲ್ಲರೂ ಕೂಡಿ ಕೊಂಡು ಚರ್ಚೆ ಮಾಡಿ ಈ ಸಭೆ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತದೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಹಾಸನ ಮಹಿಳಾ ಸಹಕಾರಿ ಬ್ಯಾಂಕ್ ಏನಿದೆ, ಇದು ಹುಟ್ಟಿನಿಂದಲೇ ತೊಡಕಿನಲ್ಲಿ ಬೆಳೆಯುತ್ತಾ ಬಂದಿದೆ, ಇದು ತಮಗೆಲ್ಲಾ ಗೊತ್ತಿದೆ. ಇದರಲ್ಲಿ ಮೊದಲು ಹೆಣ್ಣು ಮಕ್ಕಳು, ಪಕ್ಷಾತೀತವಾಗಿ ಎಲ್ಲಾ ಪಕ್ಷದವರು ಸೇರಿಕೊಂಡು ಶೇರನ್ನು ಕೂಡಿಸಿದರು ಇದನ್ನು ನಾನು ನೋಡಿದ್ದೇನೆ. ಶೇರನ್ನು ಕೂಡಿಸಿ ನನ್ನ ಕಡೆ ಅವರೆಲ್ಲಾ ಬಂದರು. ತಾವೇನು ಬೇನಾಮಿ ಸದಸ್ಯರೆಂದು ಹೇಳಿದಿರಿ, ಬೇನಾಮಿ ಸದಸ್ಯರನ್ನು ಯಾರನ್ನು ಮಾಡಿಲ್ಲ. ಅಲ್ಲಿ ಯಾರು ಚೀಫ್ ಪ್ರಮೋಟರ್ಸ್ ಇದ್ದಾರೆ ಅವರಲ್ಲಿ ಕೆಲವರನ್ನು ನಾವು ಮಾಡಿಕೊಳ್ಳುವುದಿಲ್ಲವೆನ್ನುತ್ತಿದ್ದರು, ಅಲ್ಲಿ ಯಾರ್‍ಯಾರು ಇದ್ದರು ಅವರೆಲ್ಲಾ ಕೂಡಿಕೊಂಡು ರಿಜಿಸ್ಟ್ರೇಷನ್ ಮಾಡಿಕೊಡಿ ಎಂದು ಹೇಳಿದ ಮೇಲೆ ರಿಜಿಸ್ಟ್ರೇಷನ್ ಮಾಡಿ, ನಮ್ಮ ಜಾಯಿಂಟ್ ರಿಜಿಸ್ಟ್ರಾರ್ ಆ ಸದಸ್ಯರಿಗೆ ಯಾದಿಯನ್ನು ಕಳುಹಿಸಿ, ಆ ರಿಜಿಸ್ಟ್ರೇಷನ್ ಪ್ರಕಾರ ನೀವು ಜನರಲ್ ಬಾಡಿ ಮಾಡಿಕೊಂಡು ಡೈರೆಕ್ಟರ್ ಆರಿಸಿಕೊಂಡು ನಿಯಮದ ಪ್ರಕಾರ ಮಾಡಿ ಎಂದು ಹೇಳಿ ಚುನಾವಣಾಧಿಕಾರಿಯನ್ನು ನೇಮಿಸಿ, ಅಲ್ಲಿ ಜನರಲ್ ಬಾಡಿ ಮಾಡುವುದಕ್ಕೂ ಕೂಡ ಆದೇಶ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಆದರೆ ಆ ಚೀಫ್ ಪ್ರಮೋಟರ್‌ಗೆ ಪತ್ರ ಬರೆದರೂ ಸಿಗಲಿಲ್ಲ, ಪತ್ರ ಬರೆದರೂ ಮುಟ್ಟುತ್ತಲೇ ಇರಲಿಲ್ಲ ಕೊನೆಗೆ ಹೀಗಾಗಿ ಆ ಜನರಲ್ ಬಾಡಿಯಲ್ಲೇ ಆರಿಸಬೇಕಾಯಿತು. ಮೊದಲನೆ ಜನರಲ್ ಬಾಡಿಯಲ್ಲಿ ಅವರು ಡೈರೆಕ್ಟರ್‌ಗಳನ್ನು ಆರಿಸಬೇಕಾಗುತ್ತದೆ ಆ ವಿಷಯ ಕೂಡ ಅವರಲ್ಲಿ ಇರಲಿಲ್ಲವೆಂದು ಕೇಳಿದ್ದೇನೆ, ಅದು ನನ್ನ ಮುಂದಿಲ್ಲ, ಸಂಪೂರ್ಣವಾದ ವಿವರವನ್ನು ತರಿಸಿ ತಮಗೆ ಸಂಪೂರ್ಣವಾದ ವಿವರವನ್ನು ಕೊಡುತ್ತೇನೆ, ಈ ತಕ್ಷಣ ಸಂಪೂರ್ಣವಾದ ವರದಿ ಬಂದಿಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಆ ಜನರಲ್ ಬಾಡಿಯಲ್ಲಿ ಡೈರೆಕ್ಟರ್ಸ್ ಆರಿಸತಕ್ಕಂಥ ಒಂದು ವಿಷಯವನ್ನು ಕೂಡ ಅಲ್ಲಿ ಇಟ್ಟಿಲ್ಲ, ಮತ್ತೆ ಅವರು ನಮ್ಮ ಅಧಿಕಾರಿಗಳಿಗೆ ಸಿಗಲಿಲ್ಲ, ಕೊನೆಗೆ ಅವರೆ ಒಂದು ಪೇಪರ್‌ನಲ್ಲಿ ಕೊಟ್ಟು ತಾವೇ ಮುಂದಾಗಬೇಕೆಂದು ತಿಳಿದುಕೊಂಡು ಕಾಯಿದೆ ಇಲ್ಲದೆ ಮಾಡಿದ್ದಾರೆಂದು ಕೂಡ ನಾನು ಕೇಳಿದ್ದೇನೆ. ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ, ಅವರು ನಡೆಸಿದ ಜನರಲ್ ಬಾಡಿ ಒಂದು ಕಾಯಿದೆ ಪ್ರಕಾರವಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಇಲ್ಲದಿದ್ದರೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡು ಆ ಒಂದು ಸಂಸ್ಥೆ ನಡೆಯುವುದಕ್ಕೆ ಕೂಡ ನಾನು ವ್ಯವಸ್ಥೆ ಮಾಡುತ್ತೇನೆ. ಇನ್ನು ತಾವು ಇಲ್ಲೆಲ್ಲಾ ಹೆಣ್ಣುಮಕ್ಕಳಿದ್ದರು ಎಂದು ಹೇಳಿದಿರಿ, ಇದರ ಫೋಟೋ ನೋಡಿದರೆ ಗಂಡುಮಕ್ಕಳಿದ್ದಾರೆ. ಇದರ ಹಿಂದೆ ಏನೋ ಕೂಡಿದೆ, ಒಂದು ಕೈಯಲ್ಲಿ ಚಪ್ಪಾಳೆಯಾಗುವುದಿಲ್ಲ. ಆ ಹೆಣ್ಣು ಮಕ್ಕಳೆಲ್ಲಾ ಕೂಡಿ ಸುಮ್ಮನೆ ಇದ್ದರೆ, ಈ ಪ್ರಶ್ನೆನೇ ಬರುತ್ತಿರಲಿಲ್ಲ. ನಾನು ಆ ಮಹಿಳೆಗೆ ಕರೆಯಿಸಿ ಕೂಡ ನಾನು ಹೇಳಿದೆ,

ಬೇಡಮ್ಮ ನೀವೆಲ್ಲಾ ಕೂಡಿಕೊಳ್ಳಿ, ಯಾರನ್ನು ಕೇಳಬೇಡಿ ಸುಮ್ಮನೆ ಎಲ್ಲರೂ ಕೂಡಿಕೊಂಡು ಮಾಡಿರಿ ಹೊಂದಿಕೊಂಡು ಹೋಗಿ, ಆರಿಸಿಕೊಳ್ಳಿ ಎಂದು ಹೇಳಿದರೂ ಕೂಡ, ಮುಂದೆ ನಾವು ರಿಜಿಸ್ಟ್ರೇಷನ್ ಮಾಡಿಕೊಟ್ಟು ಜನರಲ್‌ಬಾಡಿ ಕರೆಯಿರಿ ಎಂದು ಹೇಳಿದರು ಕೂಡ ಅವರು ಕಾಯಿದೆ ಪ್ರಕಾರ ಕರೆದಿಲ್ಲ. ಈಗ ನಮ್ಮ ರಿಟರ್ನಿಂಗ್ ಆಫೀಸರ್ ನೋಟಿಸ್ ಕೊಟ್ಟಿದ್ದರು ತೆಗೆದುಕೊಂಡಿಲ್ಲ, ಇದೆಲ್ಲಾ ನಡೆದಂಥ ವ್ಯವಸ್ಥೆಯಾಗಿದೆ.

11.30 ಎ.ಎಂ.

ಆ ಕಾರಣದಿಂದ ಇದರ ಬಗ್ಗೆ ಸಂಪೂರ್ಣವಾದಂತಹ ವರದಿಯನ್ನು ತರಿಸಿ, ಕಾಯಿದೆ ಕಕ್ಷೆಯಲ್ಲಿ ಯಾವುದೇ ಮುಲಾಜು ಇಲ್ಲದೇ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಎಲ್ಲಾ ಸದಸ್ಯರಿಗೆ ಕೊಡಬಯಸುತ್ತೇನೆ.

+ ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಹಿರಿಯ ಸದಸ್ಯರೆಲ್ಲರೂ ಸೇರಿ ಹಾಸನ ಜಿಲ್ಲೆಯ ಸಹಕಾರಿ ಇಲಾಖೆಯಲ್ಲಿ ಜಿಲ್ಲಾ ಮಂತ್ರಿಗಳು, ಹಸ್ತಕ್ಷೇಪ ಸಹಕಾರ ಮಂತ್ರಿಗಳ ಮುಖೇನ ಮಾಡುತ್ತಿದ್ದಾರೆ ಎಂಬ ಆಪಾದನೆ ಮಾಡಿದ್ದಾರೆ. ಆದ್ದರಿಂದ, ಈ ಬಗ್ಗೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವನಾಗಿ ನಾನು ಹೇಳಿಕೆ ಕೊಡದೇ ಹೋದರೆ ತಪ್ಪಾಗುತ್ತದೆ. ಹಾಸನದಲ್ಲಿ ನಡೆದಂತಹ ಡಿ.ಸಿ.ಸಿ. ಬ್ಯಾಂಕ್ ಚುನಾವಣೆ ಬಗ್ಗೆ ಹಾಗೂ ಕುಂದೂರು, ಕೆಂಚಮ್ಮನ ಹೊಸಕೋಟೆಯಲ್ಲಿ ನಡೆದಂತಹ ಚುನಾವಣೆಗಳ ಬಗ್ಗೆ ಮಾನ್ಯ ಶಿವಪ್ಪನವರು ಹೇಳಿದರು. ಇವೆಲ್ಲವುಗಳ ಬಗ್ಗೆ ಸದನಕ್ಕೆ ಒಂದು ವರದಿ ತರಿಸಿ. ಅದರಲ್ಲಿ ನನ್ನದೇನಾದರೂ ತಪ್ಪು ಇದ್ದರೆ ಯಾವಾಗ ಬೇಕಾದರೂ ಕ್ರಮ ತೆಗೆದುಕೊಳ್ಳಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಈಗ ಆ ವಿಷಯದ ಬಗ್ಗೆ ನಾನಿಲ್ಲಿ ಸವಿಸ್ತಾರವಾಗಿ ಹೇಳಬೇಕಾಗುತ್ತದೆ. ಹಾಸನ ಜಿಲ್ಲೆಯಲ್ಲಿ 14 ಸ್ಥಾನಕ್ಕೆ ಚುನಾವಣೆ ನಡೆಯಿತು. ಸಕಲೇಶಪುರದಿಂದ ಕಾಂಗ್ರೆಸ್‌ನವರನ್ನೇ ಅವಿರೋಧವಾಗಿ ಆಯ್ಕೆ ಮಾಡಿದರು. ನಮಗೆ 7 ಜನರ ಮೆಜಾರಿಟಿ ಇತ್ತು. ಅವರು ಅಲ್ಲಿ ಸ್ಥಳೀಯವಾಗಿ ಆ ತಾಲ್ಲೂಕಿನಲ್ಲಿ ಹೊಂದಾಣಿಕೆ ಮಾಡಿಕೊಂಡು ಆಯ್ಕೆಯಾದರು. ಅದಕ್ಕೆ ನಾನೇನು ಬೇಡ ಅಂದೆನೆ. ಸಕಲೇಶಪುರ ತಾಲ್ಲೂಕಿನಲ್ಲಿ ನಡೆದಿರುವುದು ಮಾನ್ಯ ಶಿವಪ್ಪನವರಿಗೆ ಗೊತ್ತಿದೆ. ಸಕಲೇಶಪುರ ತಾಲ್ಲೂಕಿನಿಂದ ಆಯ್ಕೆಯಾದವರು ಕಾಂಗ್ರೆಸ್‌ನಲ್ಲಿ ದುಡಿದಂತಹ ವ್ಯಕ್ತಿ, ಅವನು ಹಿಂದಿನಿಂದ ಮೆಂಬರ್ ಆಗಿದ್ದ. ಅಲ್ಲಿ ಲೋಕಲ್ ಅಡ್ಜಸ್ಟ್‌ಮೆಂಟ್ ಮೇಲೆ ಅವರು ಕಾಂಗ್ರೆಸ್ ಪಕ್ಷದವರನ್ನೇ ಆಯ್ಕೆ ಮಾಡಿಕೊಂಡರು. ಮಾನ್ಯ ಶಿವಪ್ಪನವರು ಬೇಕಾದರೆ ಇದನ್ನು, 'ಇಲ್ಲ' ಎಂದು ಹೇಳಲಿ, ಅದನ್ನು ನಾನು ಒಪ್ಪುತ್ತೇನೆ. ಅಲ್ಲಿಂದ ಬಂದರೆ ಆಲೂರು ತಾಲ್ಲೂಕು, ಕಾಂಗ್ರೆಸ್ ಅಧ್ಯಕ್ಷರು ಮತ್ತು ಇನ್ನೊಬ್ಬರನ್ನು ಆಯ್ಕೆ ಮಾಡಿದರು. ಯಾರು ಕಾಂಗ್ರೆಸ್‌ನಿಂದ ಕುಂದೂರಿನಲ್ಲಿ ಆಯ್ಕೆಯಾಗಿದ್ದಾರೋ ಅವರನ್ನು ನಾನು ಕೇಂದ್ರ ಸರ್ಕಾರದ ಕಾಫಿ ಬೋರ್ಡ್ ಮೆಂಬರ್ ಮಾಡಿದ್ದೇನೆ. ಇದು ಮಾನ್ಯ ಶಿವಪ್ಪನವರಿಗೂ ಗೊತ್ತಿದೆ. ನಾನು ಆ ಸಣ್ಣತನಕ್ಕೆ ಹೋಗುವ ಹಾಗಿದ್ದರೆ ನಾನು ಅವರನ್ನು ಕಾಫಿ ಬೋರ್ಡ್‌ನ ಮೆಂಬರ್ ಆಗಿ ಮಾಡುತ್ತಿರಲಿಲ್ಲ. ಮೊಹನ್ ಎಂದು ಯಾರೋ ಎಲೆಕ್ಷನ್‌ನಲ್ಲಿ ನಿಂತಿದ್ದರಲ್ಲಾ, ನಿಂದು ಸೋತರಲ್ಲಾ, ಅವರನ್ನು ನಮ್ಮ

ಸಂಯುಕ್ತರಂಗ ಸರ್ಕಾರ ಕೇಂದ್ರದಲ್ಲಿದ್ದಾಗ ನಾನೇ ಅವರನ್ನು ಕಾಫಿ ಬೋರ್ಡ್ ಸದಸ್ಯರನ್ನಾಗಿ ಮಾಡಿದೆ. ಹಾಗೆಯೇ ಹಾಸನ ಕೋ-ಆಪರೇಟೀವ್‌ನಲ್ಲಿರುವ ನೆಲ್ಲೂರೇಗೌಡರ ಅಣ್ಣ ಮುದ್ದೇಗೌಡರನ್ನು ಕಾಫಿ ಬೋರ್ಡ್ ಮೆಂಬರ್ ಮಾಡಿದ್ದೇವೆ. ಒಬ್ಬ ವ್ಯಕ್ತಿ ಒಳ್ಳೆಯವನು ಎನ್ನುವ ದೃಷ್ಟಿಯಿಟ್ಟುಕೊಂಡು ಈ ರೀತಿ ಮೆಂಬರ್ ಮಾಡಿದ್ದೇವೆಯೇ ಹೊರತು ಅವರು ಕಾಂಗ್ರೆಸ್ ಅಧ್ಯಕ್ಷರು, ಅವರನ್ನು ಮೆಂಬರ್ ಮಾಡಬಾರದು ನಮಗೆ ಇರಲಿಲ್ಲ. ಅದೇ ರೀತಿ ಅವರ ತಾಲ್ಲೂಕಿನ ಗಣಪತಯ್ಯ ಎನ್ನುವವರನ್ನೂ ಕೂಡ ಕಾಫಿ ಬೋರ್ಡ್ ಮೆಂಬರ್ ಮಾಡಿಸಿದೆ. ಆಲೂರು ತಾಲ್ಲೂಕಿನಲ್ಲಿ, ಕುಂದೂರಿನಲ್ಲಿ ಏನಿದೆ? ಏನೇನು ನಡೆಯಿತು ಎಂಬುದನ್ನು ಬೇಕಾದರೆ ತಾವು ಈ ಸಭೆಗೆ ಮಾನ್ಯ ಸಹಕಾರ ಸಚಿವರ ಮೂಲಕ ಮಾಹಿತಿ ತರಿಸಿ. ಕುಂದೂರಿನಲ್ಲಿ ಇರಬಹುದು, ಕೆಂಚಮ್ಮ ಹೊಸಕೋಟೆಯಲ್ಲಿ ಇರಬಹುದು, ಅಲ್ಲಿ ಏನು ನಡೆಯಿತು? ಏನು ವಿಷಯ? ಎಂಬ ಬಗ್ಗೆ ಮಾಹಿತಿ ತರಿಸಿ, ಅದರಲ್ಲಿ ಯಾರು ತಪ್ಪು ಮಾಡಿದ್ದಾರೆ ಎಂಬ ಬಗ್ಗೆ ಸರ್ಕಾರ ಸದನಕ್ಕೆ ವಿವರ ಕೊಡಲಿ. ಜಿಲ್ಲಾ ಮಂತ್ರಿಗಳ ಹಸ್ತಕ್ಷೇಪ ಏನಾದರೂ ಇದರಲ್ಲಿ ಇದೆ ಎನ್ನುವುದಾದರೆ, ಸಭೆ ಏನು ಹೇಳುತ್ತದೋ ಅದಕ್ಕೆ ನಾನು ತಲೆಬಾಗುತ್ತೇನೆ. ಅದರ ಜೊತೆಗೆ ಹಾಸನ ಡಿ.ಸಿ.ಸಿ. ಬ್ಯಾಂಕ್ ಇರಬಹುದು, ಮಹಿಳಾ ಬ್ಯಾಂಕ್ ಇರಬಹುದು, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕಾರಿ ಸಚಿವರಾಗಿದ್ದರು, ಇಲ್ಲಿ ಮಾನ್ಯ ಶಿವಪ್ಪನವರು, ವಾಟಾಳ್ ನಾಗರಾಜ್‌ರವರು ಎಲ್ಲರೂ ಇದ್ದಾರೆ. ಆ ಮಹಿಳಾ ಬ್ಯಾಂಕ್ ಹುಟ್ಟಿದ ದಿನದಿಂದ ಅದರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನಿನ್ನೂ ಸಹಕಾರಿ ರಂಗದಲ್ಲಿ ಅಷ್ಟು ಬೆಳೆದಿಲ್ಲ. ಹಿಂದೆ ಕೃಷ್ಣಮೂರ್ತಿ ಎಂಬುವವರು ಎಂ.ಎಲ್.ಸಿ. ಇದ್ದರು, ಅವರ ಪತ್ನಿಯವರೇ ಅದಕ್ಕೆ ಅಧ್ಯಕ್ಷರಾಗಿದ್ದರು. ಹಿಂದೆ ಕಾಂಗ್ರೆಸ್ ಪಕ್ಷ ಇದ್ದಾಗ ಕಮಿಟಿಯೊಂದನ್ನು ಮಾಡಿದ್ದರೋ ಏನೋ ನನಗೆ ಗೊತ್ತಿಲ್ಲ. ಆ ಕಮಿಟಿಯವರು ಯಾರ್‍ಯಾರನ್ನು ಮಾಡಿದ್ದರೋ ಗೊತ್ತಿಲ್ಲ. ಅವರು ಸುಮಾರು 14 ಜನ ಮೆಂಬರ್ಸ್ ಇದ್ದರು. ಮಾನ್ಯ ಕೃಷ್ಣಮೂರ್ತಿಯವರು ಸತ್ತು ಹೋದ ತಕ್ಷಣ ಅವರ ಪತ್ನಿ ನಾವು ಗೌರವವಾಗಿ ರಾಜೀನಾಮೆ ಕೊಡುತ್ತೇವೆ ಅಂದರು. ಅವರು ರಾಜೀನಾಮೆ ಕೊಟ್ಟ ಮೇಲೆ ಅವರವರಲ್ಲೇ ತಿಕ್ಕಾಟ ಬಂತು. ಆಗ ನಮ್ಮ ಹಿರಿಯ ಧುರೀಣರಾದ ಮಾನ್ಯ ಶ್ರೀಕಂಠಯ್ಯನವರು ನನಗೆ ಫೋನ್ ಮಾಡಿ, ಇಂತಹವರನ್ನೇ ಅಧ್ಯಕ್ಷರಾಗಿ ಮಾಡಬೇಕು ಅಂದರು. ಅದಕ್ಕೆ ನಾನು ಆಯಿತು ಮಾಡಿ ಸ್ವಾಮಿ, ಯಾರನ್ನು ಮಾಡಿಕೊಂಡರೆ ನನಗೇನಂತೆ, ಮಹಿಳಾ ಸಂಘ ಕಟ್ಟಿಕೊಂಡು ನನಗೇನಾಗ ಬೇಕಾಗಿದೆ ಎಂದು ಹೇಳಿದೆ. ಅವರು ಹೇಳಿದವರನ್ನೇ ಅಧ್ಯಕ್ಷರನ್ನಾಗಿ ಮಾಡಿದೆವು. ಅದರಲ್ಲಿ ಏನಾದರೂ ಇಲ್ಲ ಎಂದರೆ ಬೇಕಾದರೆ ತಾವು ಹೇಳಿ, ಅದು ಯಾರೋ ಲಲಿತಮ್ಮ ಅಂದರಲ್ಲಾ ಅವರು ಹೇಳಿದವರನ್ನೇ ನಾನು ಅಧ್ಯಕ್ಷರನ್ನಾಗಿ ಮಾಡಿದೆ. ಇದಾದ ಮೇಲೆ ಸಹಕಾರ ಮಂತ್ರಿಗಳ ಹತ್ತಿರ ಬಂದರು, ಅವರ ಆಫೀಸ್‌ನಲ್ಲಿ ಒಂದು ಮೀಟಿಂಗ್ ಆಯಿತು. ಅವತ್ತು ಬಿಟ್ಟರೆ ಯಾವತ್ತೂ ಸಹ ಅವರ ಮುಖವನ್ನೇ ನೋಡಲಿಕ್ಕೆ ನಾನು ಹೋಗಿಲ್ಲ. ಸಹಕಾರ ಸಚಿವರ ಆಫೀಸ್‌ನಲ್ಲಿ ಒಂದು ದಿವಸ ಎಲ್ಲಾ ಸೇರಿದರು, ಅವತ್ತು ನಾನು ಮತ್ತು ಹಾಸನದ ಎಂ.ಎಲ್.ಎ. ಯವರು ಇದ್ದರು. ಆಗ ಅಲ್ಲಿಗೆ ಬಂದಿದ್ದ ಮಾನ್ಯ ವಿಧಾನ ಪರಿಷತ್ತಿನ ಉಪ ಸಭಾಪತಿಯವರಾದ ಶ್ರೀಮತಿ ರಾಣಿ ಸತೀಶ್‌ರವರು, ಏನು ರೇವಣ್ಣನವರೇ ಈ ತರಹ ಇದೆ ಎಂದು ಮಹಿಳಾ ಬ್ಯಾಂಕ್‌ನ ಬಗ್ಗೆ ನನಗೆ ಕೇಳಿದರು. ನಾನು ಅವರಿಗೆ ಹೇಳಿದೆ, ಮೇಡಮ್ ನೀವು

ಕುಳಿತುಕೊಳ್ಳಿ, ನೀವು ಏನು ಹೇಳುತ್ತೀರೋ ಅದಕ್ಕೆ ನಾನು ಭಾಗಿಯಾಗುತ್ತೇನೆ ಎಂದೆ. ಯಾರನ್ನಾದರೂ ಡೈರೆಕ್ಟರ್ ಮಾಡಿಕೊಳ್ಳಲಿ, ನನಗೇನು ? ಸ್ಟಾರ್ಟಿಂಗ್‌ನಿಂದ ಏನೇನು ನಡೆದಿದೆ ಎಂಬ ಬಗ್ಗೆ ಬೇಕಾದರೆ ಪ್ರೊಸೀಡಿಂಗ್ಸ್ ತರಿಸಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಸಹಕಾರಿ ಸಚಿವರು ಆಗಿದ್ದರು. ಅವರು ಅದನ್ನು ಪೂರ್ತಿ ತರಿಸಿ ನೋಡಲಿ, ಅವರು ಮತ್ತು ಮಾನ್ಯ ಶಿವಪ್ಪನವರು, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಜಡ್ಜ್‌ಮೆಂಟ್ ಕೊಡುತ್ತಾರೋ ಅದಕ್ಕೆ ನಾನು ಬೇಕಾದರೆ ಜಿಲ್ಲಾ ಸಚಿವನಾಗಿ, ಏನು ಹೇಳುತ್ತಾರೋ ಅದಕ್ಕೆ ನಾನು ಭಾಗಿಯಾಗುತ್ತೇನೆ. ಸಭೆಯಲ್ಲಿ ಆರಂಭದಿಂದ ಏನು ನಿರ್ಣಯ, ಯಾವ ತರಹದ ನಿರ್ಣಯ ಮಾಡಿಕೊಂಡರು ಎಂಬುದನ್ನು ನೋಡಬಹುದು. ಮಾನ್ಯ ಸದಸ್ಯರು ಏನೋ 300 ಜನ ಬೇನಾಮಿ ಷೇರ್ ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಆ ಬಗ್ಗೆಯೂ ಕೂಡ ಬೇಕಾದರೆ ಅವರು ವರದಿ ತರಿಸಿಕೊಂಡು ನೋಡಲಿ. ಮೊನ್ನೆ ಈ ವಿಷಯ ಪೇಪರ್‌ನಲ್ಲಿ ಬಂದ ಮೇಲೆ ನಾನು ಏನು ವಿಷಯ ಎಂದು ಚೀಫ್ ಪ್ರಮೋಟರ್‌ಅವರನ್ನು ಕೇಳಿದೆ. ಆ ಚೀಫ್ ಪ್ರಮೋಟರ್‌ರವರೇ 14 ಜನ ಸದಸ್ಯರ ಬೋರ್ಡ್ ಇದೆಯಲ್ಲಾ ಅಲ್ಲಿ ಅಪ್ರೂವ್ ಮಾಡಿ ಆ ಸಭೆಯಲ್ಲಿ ನಿರ್ಣಯ ಮಾಡಿದ್ದಾರೆ. ಆ ನಿರ್ಣಯದ ಕಾಪಿಯನ್ನು ಬೇಕಾದರೆ ಮಾನ್ಯ ಸಹಕಾರಿ ಸಚಿವರ ಇಲಾಖೆಯಿಂದ ತರಿಸಿ ನೋಡಿ. ನನ್ನದೇನೂ ಅದಕ್ಕೆ ಅಭ್ಯಂತರ ಇಲ್ಲ. ಬೇನಾಮಿ ಮೆಂಬರ್ ಮಾಡಿಕೊಂಡಿದ್ದರೆ ತೆಗೆದು ಹಾಕಲಿ, ಅವರ ಬಗ್ಗೆನೂ ಬೇಕಾದರೆ ಎನ್‌ಕ್ವೈರಿ ಮಾಡಲಿ. ಬೇನಾಮಿ ಕಟ್ಟಿಕೊಂಡು ನನಗೇನಾಗಬೇಕು? ಅಥವಾ ಇನ್ನೊಂದು ಕೆಲಸ ಮಾಡಲಿ. ಮಹಿಳಾ ಬ್ಯಾಂಕಿಗೆ ಆ ಪಕ್ಷದವರು, ಈ ಪಕ್ಷದವರು ಎನ್ನುವುದು ಬೇಡ, ಮಾನ್ಯ ವಿರೋಧ ಪಕ್ಷದ ನಾಯಕರೇ ಕುಳಿತುಕೊಂಡು ಯಾರನ್ನಾದರೂ, ಮಾಡಲಿ, ಅದನ್ನು ಬೇಕಾದರೆ ನಾನು ಸರ್ವಾನುಮತದಿಂದ ಒಪ್ಪಿಕೊಳ್ಳುತ್ತೇನೆ. ಮಹಿಳಾ ಬ್ಯಾಂಕ್ ಆಗುವುದಾದರೆ ಜಿಲ್ಲೆಗೆ ಒಳ್ಳೆಯದು. ಅದರಲ್ಲಿ ನನ್ನದೇನೂ ಹಸ್ತಕ್ಷೇಪ ಇಲ್ಲ. ಕಳೆದ ಎರಡು ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ಕಾನೂನು ಕುಸಿದು ಹೋಗಿದೆ ಎಂದು ಮಾನ್ಯ ಶಿವರಾಮ್‌ರವರು ಹೇಳಿದರು. ಹಾಗೂ ವಂಶಪಾರಂಪರ್ಯವಾದ ಆಡಳಿತ ನಡೆಯುತ್ತಿದೆ ಎಂದು ಹೇಳಿದರು. ನಾವೇನೂ ವಂಶಪಾರಂಪರ್ಯವಾಗಿ ಮಾಡಬೇಕಾದಂತಹ ಪ್ರಮೇಯವೇನೂ ಇಲ್ಲ. ಈ ಬಗ್ಗೆ ಅಂದರೆ ಎರಡೂವರೆ ವರ್ಷಗಳು ಕಾನೂನು ಕುಸಿದು ಹೋಗಿದ್ದರೆ ತಾವು ಮಾನ್ಯ ವಿರೋಧ ಪಕ್ಷದ ನಾಯಕರ ನೈತೃತ್ವದಲ್ಲಿ ಒಂದು ಕಮಿಟಿ ಮಾಡಿ, ಮಾನ್ಯ ಯಡಿಯೂರಪ್ಪನವರು, ಮಾನ್ಯ ಶಿವಪ್ಪನವರು ಕೂಡ ಆ ಕಮಿಟಿಯಲ್ಲಿ ಇರಲಿ. ಅವರು ಹಾಸನಕ್ಕೆ ಹೋಗಿ ಕಳೆದ ಎರಡೂವರೆ ವರ್ಷಗಳಲ್ಲಿ ರಾಜಕೀಯ ವಿರೋಧಿಗಳಿಗೆ ನಾವು ಏನಾದರೂ ಯಾವುದಾದರೂ ಕಿರುಕುಳ ಕೊಟ್ಟಿರುವುದು ಸಾಬೀತು ಪಡಿಸಿದರೆ, ಆ ಸಮಿತಿ ಏನು ಹೇಳುತ್ತದೆಯೋ ಆ ನಿರ್ಣಯಕ್ಕೆ ನಾನು ಬದ್ಧನಾಗುತ್ತೇನೆ. ಕಳೆದ ಐದು ವರ್ಷಗಳಲ್ಲಿ ಅವರು ಅಲ್ಲಿ ಏನು ಮಾಡಿದ್ದಾರೆ ಎಂಬುದನ್ನೂ ಕೂಡ ಆ ಸಮಿತಿ ತನಿಖಾ ವ್ಯಾಪ್ತಿಗೆ ಸೇರಿಸಿ. ಕಳೆದ ಐದು ವರ್ಷಗಳಲ್ಲಿ ನೀವು ಮಾಡಿದಿರಲ್ಲಾ ಸ್ವಾಮಿ, ಹಾಗೆ ನಾನು ಯಾರ ಮೇಲೂ ಅಂದರೆ ನನ್ನ ವಿರೋಧಿಗಳ ಮೇಲೂ ಕೇಸ್ ಹಾಕಿಸಲಿಲ್ಲ ಅಥವಾ ಯಾರ ಕೈ, ಕಾಲು ಕಟ್ ಮಾಡಿಸಲಿಲ್ಲ ಅಥವಾ ಯಾರನ್ನಾದರೂ ಮರ್ಡರ್ ಮಾಡಿಸಲಿಲ್ಲ ಅಥವಾ ಏನಾದರೂ ಇನ್ನೊಂದು ಪಾಪದ ಕೆಲಸ ಮಾಡಿದ್ದರೆ ಬೇಕಾದರೆ ಆ ಬಗ್ಗೆ ಸಭೆಯ ಮುಂದೆ ವರದಿ ಇಡಲಿ. ಅದಕ್ಕೆ ಮಾನ್ಯ

ಸಭಾಧ್ಯಕ್ಷರು ಏನು ಹೇಳುತ್ತಾರೋ ಅದಕ್ಕೆ ನಾನು ತಲೆಬಾಗುತ್ತೇನೆ. ಅರಕಲಗೂಡಿನ ಬಗ್ಗೆ ಮಾನ್ಯ ರಾಮಸ್ವಾಮಿಯವರು ಆಗಲೇ ಹೇಳಿದರು. ಅರಕಲಗೂಡಿನಲ್ಲಿ ಒಂದು ಕುಡಿಯುವ ನೀರಿನ ಯೋಜನೆ ಮಾಡಿದರು. ಅಲ್ಲಿಯ ಕುಡಿಯುವ ನೀರಿನ ಯೋಜನೆ ಮಾಡಬೇಕಾದರೆ ಕಾಂಗ್ರೆಸ್ ಸರ್ಕಾರದಿಂದ ಸ್ಯಾಂಕ್ಷನ್ ಮಾಡಿಸಿದ್ದರು. ನಾವು ಏನಾದರೂ ಮಾಡಿದರೆ ನಾಳೆ ಅದೊಂದು ಆಪಾದನೆಯಾಗುತ್ತದೆ. 11 ಲಕ್ಷ ರೂಪಾಯಿಗಳ ಪೈಪನ್ನು, ಬೇಕಿಲ್ಲದ ಪೈಪ್ ಅನ್ನು ತರಿಸಿ ಇಟ್ಟಿದ್ದರು. ಇವತ್ತು ಆ ಊರಿಗೆ ಅವರು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಸ್ಯಾಂಕ್ಷನ್ ಮಾಡಿದ್ದು ಆಗಲೇ ಇಲ್ಲ. ಮಾನ್ಯ ಬಚ್ಚೇಗೌಡರು ಸದನದಲ್ಲಿ ಇರಬಹುದು. ಇವತ್ತು ಕೇಂದ್ರ ಸರ್ಕಾರಕ್ಕೆ ನಾನೇ ಹೋರಾಟ ಮಾಡಿ 2 ಕೋಟಿ 65 ಲಕ್ಷ ರೂಪಾಯಿಗಳ ಎಸ್ಟಿಮೇಟ್ ತೆಗೆದುಕೊಂಡು ಹೋಗಿ ಗಲಾಟೆ ಮಾಡಿ ಅದನ್ನು ಮಾಡಿಸಿದೆ. ಈಗ ಚ್ಯಾನಲ್‌ನಲ್ಲಿ ನಾಳೆ ನೀರು ಬಿಡಬೇಕು ಅಂದರೆ, ನೀರಾವರಿ ಸಲಹಾ ಸಮಿತಿಯಲ್ಲಿ ಅವರೂ ಕೂಡ ಒಬ್ಬ ಮೆಂಬರ್. ನೀರಾವರಿ ಸಲಹಾ ಸಮಿತಿಯಲ್ಲಿ ಇಂತಹ ದಿವಸ ನೀರು ಬಿಡುತ್ತಾರೆ ಎಂದು ನಿರ್ಣಯ ಮಾಡುವವರು ಯಾರು? ನಾನು ನಿರ್ಣಯ ಮಾಡುತ್ತೇನೆಯೇ? ನೀರಾವರಿ ಸಲಹಾ ಸಮಿತಿಯ ಸದಸ್ಯರೆಲ್ಲಾ ಸೇರಿ ಇಂತಹ ದಿವಸ ಇಷ್ಟು ನೀರು ಬಿಡೋಣ ಎಂದು ನಿರ್ಧರಿಸುತ್ತಾರೆ. ಇವರು ಹಿಂದಿನ ದಿವಸ, ಅಂದರೆ ನೀರು ಬಿಡುವ ಹಿಂದಿನ ದಿವಸ ಹೋಗಿ ನೀರು ಇಂತಹ ಟೈಮ್‌ಗೆ ಬಿಡಲಿಲ್ಲ ಎಂದು ಹೇಳಿ ಇವರು ಸ್ಟ್ರೈಕ್ ಮಾಡುತ್ತಾರೆ. ಪ್ರಚಾರಕ್ಕೋಸ್ಕರ ಈ ಸದನ ಉಪಯೋಗ ಮಾಡುವುದಾದರೆ ಮಾಡಲಿ. ಅಂಥಾದ್ದೇನಾದರೂ ನಾನಾಗಲೀ ನಮ್ಮ ಅಪ್ಪನಾಗಲೀ ತಪ್ಪು ಮಾಡಿದ್ದರೆ ಒಂದು ದಿನ ಬೇಕಾದರೆ ಈ ಬಗ್ಗೆ ಚರ್ಚೆ ಇಲ್ಲಿ ನಡೆಯಲಿ. ಹಾಸನ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಏನು ನಡೆದಿದೆ? ಈ ಸರ್ಕಾರ ಬಂದ ಮೇಲೆ ಏನು ನಡೆದಿದೆ? ಎಂಬ ಬಗ್ಗೆ ಈ ಸದನದಲ್ಲಿ ಪೂರ್ತಿಯಾಗಿ ಚರ್ಚೆಯಾಗಲಿ. ಚರ್ಚೆ ನಡೆದಾಗ ಚರ್ಚೆಯಿಂದ ನಾನು ಏನಾದರೂ ತಪ್ಪು ಮಾಡಿರುವುದು ಕಂಡು ಬಂದರೆ ನೀವು ಏನು ಹೇಳುತ್ತೀರೋ ಅಥವಾ ಈ ಸಭೆ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ಅದಕ್ಕೆ ನಾನು ಬದ್ಧನಾಗುತ್ತೇನೆ. ಅದು ಬಿಟ್ಟು ದಿನ ಬೆಳಿಗ್ಗೆ ಎದ್ದ ಕೂಡಲೇ ಹಾಸನ ಜಿಲ್ಲೆಯಲ್ಲಿ ಸರ್ವಾಧಿಕಾರ ನಡೆಯುತ್ತಿದೆ ಎನ್ನುವುದು ಬೇಡ. 'ಸರ್ವಾಧಿಕಾರ' ಎಂದರೆ ಏನು ಎಂದು ನನಗೇನೂ ಅರ್ಥವಾಗಲಿಲ್ಲ, ನಾನಿನ್ನೂ ಆ ಮಟ್ಟಕ್ಕೆ ವಿದ್ಯಾಭ್ಯಾಸ ಮಾಡಿಲ್ಲ. ಮಾನ್ಯ ಶಿವಪ್ಪನವರು ಬೇಕಾದರೆ ಅವರ ಕ್ಷೇತ್ರದಲ್ಲಿ ನಾನೇನಾದರೂ ಹಸ್ತಕ್ಷೇಪ ಮಾಡಿದ್ದೇನೆಯೋ ಎಂಬ ಬಗ್ಗೆ ಹೇಳಲಿ. ಅವರು ಬಿ.ಜೆ.ಪಿ.ಯವರು ಇರಬಹುದು. ಯಾರಾದರೂ ಅಧಿಕಾರಿಗಳ ಬಗ್ಗೆ ಇದ್ದರೆ, ಅವರನ್ನು ಪೋಸ್ಟ್ ಮಾಡುವ ಬಗ್ಗೆ ಇದ್ದರೆ ನೇರವಾಗಿ ನನ್ನ ಬಳಿ ಬನ್ನಿ ಎಂದು ನಾನು ಅವರಿಗೆ ಹೇಳಿದ್ದೇನೆ. ಯಾರೋ ಸಣ್ಣ ಪುಟ್ಟದವರು ಮಾಡಿದ್ದಕ್ಕೆ ನನ್ನನ್ನು ನೀವು ದೂಷಣೆ ಮಾಡಬೇಡಿ. ಅಲ್ಲ ಸ್ಥಳೀಯವಾಗಿ ಕಾಂಗ್ರೆಸ್‌ನ ಎರಡು ಗುಂಪು ಇದೆ. ಅವರವರು ಹೊಡೆದಾಡಿಕೊಳ್ಳುತ್ತಾರೆ. ಅವರು ಹೊಡೆದಾಡಿ ಕೊಂಡರೆ ನಾನೇನು ಮಾಡಲಿ ಸ್ವಾಮಿ. ಏನು ಮೊದಲಿನಿಂದ ಏನಾದರೂ ಇದು ಇದೆಯೇ? ಅಥವಾ ನಾನೇನಾದರೂ ಅವರ ಊರಿಗೆ ಹೋಗಿ ಬಿಟ್ಟು ಅಂದರೆ ಗಂಡಸಿ ಕ್ಷೇತ್ರದ ಯಾವುದಾದರೂ ಊರಿಗೆ ಹೋಗಿ ಪ್ರಚೋದನೆ ಮಾಡಿದ್ದೇನೆಯೇ? ಅಥವಾ ಅಲ್ಲಿ ಹೊಡೆದಾಟ ನಡೆಯುವ ಸನ್ನಿವೇಶವನ್ನೇನಾದರೂ ನಾನು ತಂದಿದ್ದೇನೆಯೇ? ನಮ್ಮ ಕೆ.ಇ.ಬಿ. ಇಲಾಖೆಯವರು ಹಾಸನ ಜಿಲ್ಲೆಯ ಜಾವಗಲ್‌ನಲ್ಲಿ ಒಂದು

ಸಬ್ ಸ್ಟೇಷನ್ ಸ್ಥಾಪನೆ ಮಾಡಿದರು. ನಾನೇನು ಅದಕ್ಕೆ ಬೇಡ ಎಂದನೇ? ಅದೇ ರೀತಿ ಅರಕಲಗೂಡಿಗೆ ಒಂದು ಸಬ್ ಸ್ಟೇಷನ್ ಕೊಟ್ಟರು, ನಾನೇನು ಅದಕ್ಕೆ ಬೇಡ ಎನ್ನಲಿಲ್ಲ. ಅದೇ ರೀತಿ ಮೂರು ಮನುಷ್ಯರ ಆಸ್ಪತ್ರೆಗಳು ಸ್ಯಾಂಕ್ಷನ್ ಆಯಿತು. ಆ ಮೂರು ಮನುಷ್ಯರ ಆಸ್ಪತ್ರೆಗಳಲ್ಲಿ ಒಂದು ಅರಕಲಗೂಡಿನ ಹುಲ್‌ಕಳ್ಳಿಗೆ ಕೊಟ್ಟಿದ್ದಾರೆ. ಒಂದನ್ನು ಹೊಳೆನರಸೀಪುರಕ್ಕೆ ಹಾಗೂ ಮತ್ತೊಂದನ್ನು ಅರಸೀಕೆರೆಗೆ ಕೊಟ್ಟಿದ್ದಾರೆ. ನಮ್ಮ ಚನ್ನರಾಯಪಟ್ಟಣದ ಎಂ.ಎಲ್.ಎ. ಕ್ಷೇತ್ರಕ್ಕೆ ಯಾವ ಆಸ್ಪತ್ರೆಯನ್ನೂ ಕೊಡಲಿಲ್ಲ. ನಾನೇನು ಅದಕ್ಕೆ ಬೇಜಾರು ಮಾಡಿಕೊಂಡಿದ್ದೇನೆಯೇ? ನನ್ನ ಜೀವನದಲ್ಲಿ ನಾನು ಎಂದಾದರೂ ಈ ರೀತಿ ಸಣ್ಣತನದಲ್ಲಿ ರಾಜಕೀಯ ಮಾಡಿದ್ದರೆ ನೀವು ನನಗೆ ಏನೂ ಬೇಕಾದರೂ ಶಿಕ್ಷೆ ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಹಿಳಾ ಬ್ಯಾಂಕಿನಲ್ಲಿ ಮೊದಲಿನಿಂದ ಇವತ್ತಿನವರೆಗೆ ಏನೇನು ನಡೆದಿದೆ ಎಂಬ ಬಗ್ಗೆ ಪೂರ್ತಿ ನಿರ್ಣಯದ ಕಾಪಿ ತರಿಸಿಕೊಳ್ಳಲಿ. ಬೇಕಾದರೆ ಅವರ ನೇತೃತ್ವದಲ್ಲಿ ಸಮಿತಿ ಮಾಡಿ ಕಳುಹಿಸಿಕೊಡಿ. ಆ ಸಮಿತಿ ಏನು ಜಡ್ಜ್‌ಮೆಂಟ್ ಕೊಡುತ್ತದೋ ಅದಕ್ಕೆ ನಾನು ಬದ್ಧನಾಗುತ್ತೇನೆ. ನಾನು ಇನ್ನೇನು ಅನಾವಶ್ಯಕವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಷ್ಟನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಿಂದ ಮಾನ್ಯ ಮಂತ್ರಿಗಳಿಗೆ ಈ ಸೊಸೈಟಿ ಬಗ್ಗೆ ಸಂಪೂರ್ಣವಾದಂತಹ ಮಾಹಿತಿ ಇದೆ ಎಂಬುದು ನಿಶ್ಚಿತವಾಯಿತು.

ಶ್ರೀ ಹೆಚ್. ಡಿ. ರೇವಣ್ಣ : ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಆ ವಿಷಯದ ಬಗ್ಗೆ ತಿಳಿದುಕೊಂಡು ಇಲ್ಲಿ ಮಾತನಾಡಿದ್ದೇನಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೆ, ನಾನು ಮಾನ್ಯ ಸಹಕಾರ ಸಚಿವರಲ್ಲಿ ಕೇಳತಕ್ಕದ್ದು ಇಷ್ಟೇ. ಮಾನ್ಯ ವಸತಿ ಸಚಿವರು ಅವರ ವಿವರಣೆಯನ್ನು ಕೊಟ್ಟರು. ನಾನು ಸಹಕಾರ ಸಚಿವರಲ್ಲಿ ಕೇಳುವುದಿಷ್ಟೆ. ಕಾನೂನಿನ ಪ್ರಕಾರ ಪ್ರಮೋಟರ್ಸ್ ಜನರಲ್ ಬಾಡಿ ಮೀಟಿಂಗ್ ಕರೆದ ಮೇಲೆ ಅಲ್ಲಿ ರೆಸಲ್ಯೂಷನ್ ಏನು ಪಾಸು ಮಾಡುತ್ತಾರೆ, ಅದು ಕಾನೂನಿನ ಪ್ರಕಾರ ಸರಿಯೋ ಅಥವಾ ತಪ್ಪೋ ಎಂದು ಹೇಳಿ ತಳ್ಳಿ ಹಾಕತಕ್ಕಂಥದ್ದು ಡೆಪ್ಯುಟಿ ರಿಜಿಸ್ಟ್ರಾರ್‌ಗೆ ಮತ್ತು ಜಾಯಿಂಟ್ ರಿಜಿಸ್ಟ್ರಾರ್‌ಗೆ ಅಧಿಕಾರ ಇದೆ. ಅಲ್ಲಿ ಇನ್ನೂ ಮೀಟಿಂಗ್ ನಡೆದೇ ಇರಲಿಲ್ಲ, ಆದರೂ ಅಲ್ಲಿ ಸೆಕ್ಷನ್ 144 ಜಾರಿಮಾಡಿ ಈ ಮೀಟಿಂಗ್ ಸರಿಯಿಲ್ಲವೆಂದು ಡೆಪ್ಯುಟಿ ಕಮಿಷನರ್ ಮುಖಾಂತರ ಸೆಕ್ಷನ್ 144ನ್ನು ಜಾರಿಮಾಡತಕ್ಕಂಥ ಅವಶ್ಯಕತೆಯಾದರೂ ಏನಿತ್ತು? ಇಲ್ಲಿ ಒಂದು ವೇಳೆ ಹೊಡೆದಾಟ, ಕಚ್ಚಾಟದಂಥ ದೊಡ್ಡ ಗಲಾಟೆಯಾಗಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಿ ಸೆಕ್ಷನ್ 144ನ್ನು ತಂದಿದ್ದರೆ ಅದನ್ನು ಒಪ್ಪಿಕೊಳ್ಳಬಹುದು. ಆ ರೆಸಲ್ಯೂಷನ್ ಸರಿ ಇಲ್ಲ, ನೋಟೀಸ್ ಸರಿಯಾಗಿ ಕೊಟ್ಟಿಲ್ಲ, ಅಜೆಂಡಾದಲ್ಲಿ ಡೈರೆಕ್ಟರನ್ನು ಎಲೆಕ್ಟ್ ಮಾಡಬೇಕಾಗಿತ್ತು, ಆ ಅಜೆಂಡಾದಲ್ಲಿ ನೀವು ಆ ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವಂಥ ಮಾತನ್ನು ಹೇಳಿ, ಕಾನೂನಿನ ಪ್ರಕಾರ ಸರಿಯಿಲ್ಲವೆಂದು ಕಂಡುಬಂದಾಗ ರೆಸಲ್ಯೂಷನ್‌ನ್ನು ನೀವು ತಿರಸ್ಕಾರ ಮಾಡಬಹುದಾಗಿತ್ತು. ಆದರೆ ರೆಸಲ್ಯೂಷನ್‌ನ್ನು ತಿರಸ್ಕಾರ ಮಾಡುವುದಕ್ಕೆ ಮುಂಚೆ, ಸಭೆ ನಡೆಯುವುದಕ್ಕೆ ಮುಂಚೆಯೇ ಅಲ್ಲಿಗೆ ಸೆಕ್ಷನ್ 144 ಜಾರಿಗೆ ಬರುತ್ತದೆ ಎಂದರೆ ಇದು ದುರುದ್ದೇಶವೋ ಅಥವಾ ಸದುದ್ದೇಶವೋ ಎಂಬುದನ್ನು ಸರ್ಕಾರವೇ ಹೇಳಬೇಕು. ಇದರಲ್ಲಿ ಪ್ರಿ-ಪ್ಲಾನ್ ಇದೆಯೋ ಅಥವಾ

ಇಲ್ಲವೋ ಎನ್ನುವುದನ್ನು ಹೇಳಬೇಕು. ಆದ್ದರಿಂದ ಇದು ಸ್ಪಷ್ಟವಾಗಿದೆ. ಅಲ್ಲಿ ಸಭೆ ನಡೆಸಿಕೊಡಬಾರದು ಎನ್ನತಕ್ಕಂಥ ತೀರ್ಮಾನದಿಂದಲೇ ಇವೆಲ್ಲಾ ನಡೆದ ಮೇಲೆ, ಆ ಸಭೆಯಲ್ಲಿ ಫೋಟೋ ನೋಡಿ ಗಂಡಸರು ಇದ್ದಾರೆಂದು ಇವರು ತೀರ್ಮಾನಿಸುವುದಾದರೆ, ಅಲ್ಲಿ 200 ಜನ ಪೋಲೀಸರು ಇದ್ದರು ಅವರನ್ನು ಏಕೆ ಇವರು ನೋಡಲಿಲ್ಲ. ಯಾವಾಗ ಆ ಸಭೆಯನ್ನು ಆದಿಚುಂಚನಗಿರಿ ಮಠದಲ್ಲಿ, ಕಲ್ಯಾಣ ಮಂಟಪದಲ್ಲಿ ಆ ಮೀಟಿಂಗ್ ಮಾಡುವುದಕ್ಕೆ ಅವಕಾಶ ಕೊಡದಿದ್ದಾಗ ಮೀಟಿಂಗ್ ನಡೆಸತಕ್ಕಂಥವರು ರಸ್ತೆಗೆ ಬಂದಾಗ ಹಾದಿಯಲ್ಲಿ ಹೋಗುವವರು ಎಲ್ಲರೂ ಬಂದು ಅಲ್ಲಿಗೆ ಸೇರಿದರು. ಇದು ಸ್ವಾಭಾವಿಕ. ಅದನ್ನು ನೋಡಿ ನೀವು ಅಲ್ಲಿ ಗಂಡಸರು ಕಾಣುತ್ತಾರೆ ಎಂದು ತೀರ್ಮಾನಿಸಿದರೆ ಹೇಗೆ? ಆ ವೀಡಿಯೋ ಕ್ಯಾಸೆಟ್‌ನ್ನು ನೋಡಿ ನೀವು ತೀರ್ಮಾನಕ್ಕೆ ಬನ್ನಿ. ಇಲ್ಲವೆಂದರೆ ಆ ಇಂಟಲಿಜೆನ್ಸ್ ರಿಪೋರ್ಟ್‌ನ್ನು ತರಿಸಿಕೊಂಡು ನೋಡಿ. ಈಗ ನಾನು ಏನು ಹೇಳುತ್ತೇನೆಂದರೆ, ಸಿ.ಓ.ಡಿ.ಯ ಅನೇಕ ವರದಿಗಳು ಇವೆ, ಕೆಲವು ವಿಷಯಗಳಲ್ಲಿ ಅನೇಕ ಜನಗಳ ಹೆಸರುಗಳು ನಮೂದು ಆಗಿವೆ. ಇದು ಒಂದರಲ್ಲಿಯೇ ಅಲ್ಲ, ಸಮಯ ಬಂದಾಗ ಅದರ ಬಗ್ಗೆ ಪ್ರಸ್ತಾಪ ಮಾಡೋಣ. ಇವತ್ತು ಕೂಡ ನಿಷ್ಪಕ್ಷಪಾತದಿಂದ ಇದನ್ನು ಎನ್‌ಕ್ವೈಯರಿ ಮಾಡಿಸುವುದಕ್ಕಿಂತ ಮುಂಚೆ ಈಗ ಏನು ಅವರು ಸಭೆ ಕರೆಸಿದ್ದರು, ಆ ಸಭೆಯನ್ನು ನೀವು ಅಂಗೀಕಾರ ಮಾಡಿ, ಆ ನಿರ್ಣಯಗಳನ್ನು ಅಂಗೀಕಾರ ಮಾಡಿ ಆನಂತರ ಅದನ್ನು ರಿಸರ್ವ್ ಬ್ಯಾಂಕ್‌ಗೆ ಕಳುಹಿಸಿಕೊಡಿ. ಇನ್ನೊಂದು ಮಹಿಳಾ ಬ್ಯಾಂಕನ್ನು ಅಲ್ಲಿಯೇ ಮಾಡಬೇಕೆಂದು ನಿಮಗೆ ಆಸೆ ಇದ್ದರೆ ಇನ್ನೊಂದು ಬ್ಯಾಂಕನ್ನು ಮಾಡಿಕೊಡಿ. ಅದನ್ನು ನಾನು ಬೇಡ ಎಂದು ಹೇಳುತ್ತಿಲ್ಲ. ಆದರೆ ದಯಮಾಡಿ ಅದನ್ನು ಬಿಟ್ಟು ಈ ಚಿತ್ರವನ್ನು ನೋಡಿಕೊಂಡು ಇದರಲ್ಲಿ ಗಂಡಸರು ಇದ್ದಾರೆ, ಇದರಲ್ಲಿ ಬೇರೆಯವರು ಇದ್ದಾರೆ, ಇದರಲ್ಲಿ ಏನೇನೋ ನಡೆದಿದೆ ಅನ್ನತಕ್ಕಂಥದ್ದನ್ನು ಹೇಳುವುದಕ್ಕೆ ಹೋಗಬೇಡಿ. ಬರೀ ಗಂಡಸರ ಫೋಟೋ ನೋಡಿಕೊಂಡು ಹೇಳಬೇಡಿ. ಹೆಣ್ಣುಮಕ್ಕಳ ಫೋಟೋ ನೋಡಿ, ಪೋಲೀಸರ ಫೋಟೋ ನೋಡಿ ಅನಂತರ ವೀಡಿಯೋ ಕ್ಯಾಸೆಟ್ ನೋಡಿ. ನಾನು ನುಡಿದಂತೆ ನಡೆಯುತ್ತೇನೆ. ಎಂದು ಈಗತಾನೆ ಮಾನ್ಯ ವಸತಿ ಸಚಿವರು ಹೇಳಿದರು. ನೀವು ನುಡಿದಂತೆ ನಡೆದಿಲ್ಲ ಎನ್ನುವುದಕ್ಕೆ ಮಾನ್ಯ ಸದಸ್ಯರು ಫೆಬ್ರವರಿ ತಿಂಗಳಲ್ಲಿ ಗಮನಸೆಳೆಯುವ ಸೂಚನೆಯಲ್ಲಿ ಕೇಳಿರುವಂಥದ್ದಕ್ಕೆತಾವು ಹೇಳಿರುವ ಉತ್ತರವನ್ನು ನಿಮ್ಮ ಮುಂದೆಯೇ ಹೇಳಿದರು. ಇದಕ್ಕಿಂತ ಸಾಕ್ಷಿ ಇನ್ನು ಯಾವುದನ್ನು ತರಬೇಕು? ಗಮನ ಸೆಳೆಯುವ ಸೂಚನೆಗೆ ಏನು ಉತ್ತರ ಕೊಟ್ಟಿದ್ದೀರಿ ಆ ಉತ್ತರವನ್ನೇ ನಿಮ್ಮ ಎದುರು ಓದಿ ಹೇಳಿದರು ಇನ್ನು ಇದಕ್ಕಿಂತ ಹೆಚ್ಚಿಗೆ ಹೇಗೆ ಹೇಳಬೇಕೋ, ಯಾವ ಭಾಷೆಯಲ್ಲಿ ಹೇಳಬೇಕೋ ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ದಯವಿಟ್ಟು ಅದನ್ನು ತಾವು ಕಳುಹಿಸಿ ಅಂಗೀಕಾರ ಮಾಡಿಕೊಂಡು, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡುತ್ತೇನೆಂದು ನೀವೇ ಸ್ವತಃ ನಮಗೆ ಹೇಳಬೇಕು. ಅದನ್ನು ಬಿಟ್ಟು ಸುಮ್ಮನೆ ಡಿಫೆಂಡ್ ಮಾಡಿಕೊಳ್ಳುವುದಕ್ಕೋಸ್ಕರ ತಪ್ಪು ಮಾಡಿದ್ದನ್ನು ಸರಿ ಇದೆಯೆಂದು ತಾವು ಹೇಳುವುದು ಸರಿಯಲ್ಲ. ಅದನ್ನು ತಿದ್ದಿಕೊಳ್ಳಬೇಕೆಂದು ಮಾನ್ಯ ವಸತಿ ಸಚಿವರಿಗೆ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರಿಗೆ ನಾನು ಹೇಳುವುದೇನೆಂದರೆ-ಪದೇ ಪದೇ ನನ್ನ ಹೆಸರನ್ನು ಹೇಳುತ್ತಿರುತ್ತಾರೆ. ಅವರು ನೇರವಾಗಿ ನನ್ನ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಲಿಲ್ಲ.

ಇದು ನಿಜವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಅವರ ಹೆಸರು ಹೇಳಿಕೊಂಡು ಅವರ ಹಿಂಬಾಲಕರು ಮಾಡಬಾರದ ಅವ್ಯವಹಾರಗಳನ್ನು ಮಾಡುತ್ತಿದ್ದಾರೆ, ಇದನ್ನು ತಾವು ಗಮನಿಸಬೇಕೆಂದು ಒಂದಲ್ಲ ಹಲವಾರು ಬಾರಿ ಮಾನ್ಯ ರೇವಣ್ಣನವರ ಗಮನಕ್ಕೆ ತಂದಿದ್ದೇನೆ. ಬಹುಶಃ ಅವರು ಇವರ ಹಿಡಿತಕ್ಕೆ ಸಿಗುತ್ತಿಲ್ಲವೋ ಅಥವಾ ಇವರು ಅವರ ಹಿಡಿತದಿಂದ ತಪ್ಪಿಸಿಕೊಂಡಿದ್ದಾರೋ ಅದು ನನಗೆ ಅಂದಾಜು ಆಗುತ್ತಿಲ್ಲ. ಅಂತೂ ಎಲ್ಲಾ ಕ್ಷೇತ್ರದಲ್ಲೂ ಇವರ ಹೆಸರು ಹೇಳಿ ಕೆಲಸ ಮಾಡುವಂಥ ಜನ ಮಾತ್ರ ತುಂಬಾ ಇದ್ದಾರೆ. ಅದು ಅವರಿಗೂ ಗೊತ್ತಿದೆ. ನಾನೂ ಕೂಡ ಅವರ ಗಮನಕ್ಕೆ ತಂದಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನನ್ನ ಹೆಸರು ಹೇಳಿಕೊಂಡು ಯಾರೋ ಏನೇನೋ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದರು. ಮಾನ್ಯ ಶಿವಪ್ಪನವರು ಹೇಳಿರುವಂಥ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನೇ ಸಕಲೇಶಪುರಕ್ಕೆ ಹಾಕಿ ಕೊಟ್ಟಿದ್ದೇನೆ. ಅಥವಾ ಯಾವುದೇ ಅಧಿಕಾರಿಗಳಿಗೆ ನಿಮ್ಮ ವಿರುದ್ಧ ಕೆಲಸ ಮಾಡಿ ಎಂದು ಯಾವುದಾದರೂ ಸೂಚನೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದರೆ, ಪೋಲೀಸ್ ಕಾನ್ಸ್‌ಟೇಬಲ್ ಯಾರೋ ಕೇಳುತ್ತಿದ್ದಾರೆಂದು ಮೊನ್ನೆ ಹೇಳಿದಿರಿ, ಇಂಥವು ಏನಾದರೂ ಇದ್ದರೆ ಹೇಳಿ. ಕಾನ್ಸ್‌ಟೇಬಲ್ ಯಾರನ್ನಾದರೂ ಚೇಂಜ್ ಮಾಡುವುದಕ್ಕೆ ಹೋಗಿದ್ದೇನೋ, ಅಥವಾ ಸಬ್‌ಇನ್ಸ್‌ಪೆಕ್ಟರ್‌ನ್ನು ಚೇಂಜ್ ಮಾಡುವುದಕ್ಕೆ ಹೋಗಿದ್ದೇನೋ, ತಾವು ಹೇಳಿದ ಸರ್ಕಲ್ ಇನ್ಸ್‌ಪೆಕ್ಟರನ್ನೇ ಚೇಂಜ್ ಮಾಡುವುದಕ್ಕೆ ಹೋಗಿದ್ದೇನೋ ಹೀಗೆ ಯಾವುದಾದರೂ ಅಧಿಕಾರಿಗಳನ್ನು ಚೇಂಜ್ ಮಾಡುವಲ್ಲಿ ನನ್ನದು ಹಸ್ತಕ್ಷೇಪ ಇದ್ದರೆ ಹೇಳಿ. ನನ್ನ ಹೆಸರು ಹೇಳಿಕೊಂಡು ಯಾರೋ ಮಾಡಿಕೊಂಡರೆ, ನನ್ನ ಹೆಸರನ್ನು ಹೇಳಿಕೊಂಡು ಯಾರೋ ತಿರುಗಿದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ಮಾತನ್ನು ಮಾನ್ಯ ವಸತಿ ಸಚಿವರಾದ ರೇವಣ್ಣನವರು ತಪ್ಪು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಯಾವುದೇ ವಿಚಾರ ನಡೆದರೂ ನಾನು ಮಾನ್ಯ ರೇವಣ್ಣನವರ ಗಮನಕ್ಕೆ ತರದೇ ಇರುವುದಿಲ್ಲ. ಅವರ ಗಮನಕ್ಕೆ ತಂದೇ ನಾನು ಕೆಲಸ ಮಾಡುತ್ತೇನೆ. ಮೊನ್ನೆ ಅವರ ಹೆಸರನ್ನು ಹೇಳಿದೆ. ಯಾವ ಯಾವ ಇಲಾಖೆಯಲ್ಲಿ ಯಾರು ಯಾರನ್ನು ವರ್ಗಾಯಿಸಬೇಕು, ಯಾರು ಯಾರನ್ನು ಇಟ್ಟುಕೊಳ್ಳಬೇಕು ಎಂದು ಒಂದು ಪಟ್ಟಿ ಮಾಡಿಕೊಂಡು ತರಲಿಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದಾರೆಂದು ಹೇಳಿ ನಿಮ್ಮ ಮಿತ್ರರು ಎಲ್ಲಾ ಇಲಾಖೆಯಲ್ಲಿ ಪಟ್ಟಿ ಮಾಡುತ್ತಿದ್ದಾರೆಂದು ಹೇಳಿದೆ. ನಿಮ್ಮ ಮಿತ್ರರು ಎಲ್ಲಾ ಇಲಾಖೆಯಲ್ಲಿ ಪಟ್ಟಿ ಮಾಡುತ್ತಿದ್ದಾರೆಂದು ಹೇಳಿದೆ. ಇದಕ್ಕೆ ನೀವು ಅವಕಾಶ ಕೊಟ್ಟಿದ್ದೀರೋ? ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ರೇವಣ್ಣನವರನ್ನೇ ಕೇಳಿದೆ. ನಾನು ಯಾರಿಗೂ ಅವಕಾಶ ಕೊಟ್ಟಿಲ್ಲವೆಂದು ಹೇಳಿದರು. ಹಾಗಾದರೆ ಅವರನ್ನು ಕರೆಸಿ ಅವರಿಗೆ ಸ್ವಲ್ಪ ಮುಖಕ್ಕೆ ಉಗಿದು ಕಳುಹಿಸಿ ಎಂದು ಹೇಳಿದೆ. ಇಷ್ಟು ವಿಚಾರವನ್ನು ಹೇಳಿದ್ದೇನೆಯೇ ಹೊರತು ಬಾಕಿ ಅವರು ಏನು ವಿರೋಧ ಮಾಡಿದ್ದಾರೆ ಎನ್ನುವ ಬಗ್ಗೆ ಇಲ್ಲಿಯೂ ಮಾತನಾಡಲಿಲ್ಲ ಮತ್ತು ಬೇರೆ ಎಲ್ಲೂ ಕೂಡ ಮಾತನಾಡಲಿಲ್ಲ. ವಿಷಯ ಇರುವುದು ಇಷ್ಟೇ. ಅವರ ಹಿಂಬಾಲಕರು ಅವರ ಹೆಸರು ಹೇಳಿ ಮಾಡಬಾರದ ಕೆಲಸ ಮಾಡುತ್ತಿದ್ದಾರೆ. ಅದು ಅಂತೂ ಸತ್ಯ.

ಅಧ್ಯಕ್ಷರು : ನಿಮ್ಮಿಬ್ಬರಲ್ಲಿಯೂ ಪರಸ್ಪರ ಒಬ್ಬರ ಬಗ್ಗೆ ಒಬ್ಬರಿಗೆ ಗೌರವ ಇದೆ. ಸಮಯ ಸಿಕ್ಕಾಗ ಏನೇನು ಹೇಳಬೇಕೋ ಇಬ್ಬರೂ ಹೇಳಿಕೊಳ್ಳಿ. ಅದಕ್ಕೆ ತೊಂದರೆ ಇಲ್ಲ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಅಲ್ಲಿ ಸಲಹಾ ಸಮಿತಿ ಬಗ್ಗೆ ಚರ್ಚೆ ಮಾಡಿದ್ದೆ. ಹೇಳುವುದು ಒಂದು, ಮಾಡುವುದು ಇನ್ನೊಂದು ನಮ್ಮ ಜಾಯಮಾನದಲ್ಲೇ ಬರಲಿಲ್ಲ. ಕೃತಕ ಜೀವನ ನಮ್ಮದಲ್ಲ. ನಾವು ನೈಜ ಜೀವನವನ್ನು ನಡೆಸಿಕೊಂಡು ಬಂದಿದ್ದೇವೆ. ನಾವು ಈ ಸದನಕ್ಕೆ ಎರಡನೇ ಸಲ ಆರಿಸಿ ಬಂದಿರತಕ್ಕಂಥದ್ದು ಆಗಿದೆ. ಯಾವ ಕ್ಲಿಷ್ಟ ರಾಜಕೀಯ ಸನ್ನಿವೇಶದಿಂದ ಆರಿಸಿ ಬಂದಿದ್ದೇವೆ ಎಂದು ತಮಗೆ ಗೊತ್ತಿದೆ. ಮೊದಲನೇ ಸಲ ಈ ವಿಧಾನಸೌಧಕ್ಕೆ ಪ್ರವೇಶ ಮಾಡಬೇಕಾದರೆ-' ಪ್ರಾಮಾಣಿಕವಾಗಿ, ಇನ್ನೂ ಶುದ್ಧ ಮನಸ್ಸಿನಿಂದ, ಸ್ವಚ್ಛ ಮನಸ್ಸಿನಿಂದ ಕೆಲಸ ಮಾಡುವುದಕ್ಕೆ ಹೆಚ್ಚು ಶಕ್ತಿ ಕೊಡು ಭಗವಂತ ಎಂದು ಹೇಳಿ, ಕೈಮುಗಿದು ನಾನು ವಿಧಾನಸೌಧಕ್ಕೆ ಪ್ರವೇಶ ಮಾಡಿದೆ. ನನಗೆ ಏನೂ ಗೊತ್ತಿಲ್ಲವೆಂದು ಅವರೇ ಹೇಳಿದ್ದು. ಲಲಿತಮ್ಮಳನ್ನು ನಾನೇ ಅಧ್ಯಕ್ಷಳಾಗಿ ಮಾಡಿಸಿದೆ ಎಂದು ಹೇಳಿದರು. ಕಡತದಲ್ಲಿ ಹೇಳಿರುವುದು ಇದೆ. ಇದು ನಿಮಗೆ ಗೊತ್ತಿದೆ. ನನಗೆ ಮಹಿಳಾ ಬ್ಯಾಂಕಿನದು ಏನೂ ವ್ಯವಹಾರವೇ ಗೊತ್ತಿಲ್ಲವೆಂದು ಹೇಳಿದರು. ನಾನೇ ಅಧ್ಯಕ್ಷರನ್ನು ಮಾಡಿದ್ದು.

ಶ್ರೀ ಬಿ. ಶಿವರಾಮು : ಶ್ರೀಕಂಠಯ್ಯನವರು ಹೇಳಿರಲಿ ಅಥವಾ ಯಾರಾದರೂ ಹೇಳಿರಲಿ. ಮಾಡಿರುವುದು ಅವರೇ ತಾನೆ.

ಶ್ರೀ ಹೆಚ್. ಡಿ. ರೇವಣ್ಣ : ಇದರ ಬಗ್ಗೆ ನಾನು ಹೇಳುತ್ತೇನೆ. ಒಂದ್ನಿಮಿಷ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಮಾತನಾಡುತ್ತಿದ್ದಾಗ ನಾನು ಮಧ್ಯದಲ್ಲಿ ಮಾತನಾಡದೆ ಸುಮ್ಮನೆ ಕೇಳುತ್ತಾ ಕುಳಿತಿದ್ದೆ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ. ನಾನು ಈಗ ಮಾತನಾಡುತ್ತೇನೆ. ಲಲಿತಮ್ಮನವರನ್ನು ನಾನೇ ಅಧ್ಯಕ್ಷಳಾಗಿ ಮಾಡಿದೆ ಎಂದು ಮಾನ್ಯ ವಸತಿ ಸಚಿವರಾದ ನೀವೇ ಹೇಳಿದಿರಿ. ಶ್ರೀಕಂಠಯ್ಯನವರು ನನಗೆ ಫೋನ್ ಮಾಡಿಸಿದ್ದರು ಎಂದು ತಾವೇ ಹೇಳಿದ್ದಿರಲ್ಲ. ಕಾಫಿ ಬೋರ್ಡಿಗೆ ನಾನೇ ಅವರನ್ನು ಮೆಂಬರ್ ಮಾಡಿದ್ದೆನೆಂದು ತಾವೇ ಹೇಳಿದ್ದಿರಲ್ಲ. ಯಾವುದಕ್ಕೂ ಹಸ್ತಕ್ಷೇಪ ಮಾಡಿಲ್ಲ ಎಂದು ಒಂದು ಕಡೆ ಹೇಳಿದಿರಿ. ಹಾಗೆಯೇ ನಾನೇ ಅಧ್ಯಕ್ಷರನ್ನಾಗಿ ಮಾಡಿಸಿದೆ ಎಂದೂ ಸಹ ಹೇಳಿದಿರಿ. ಈ ಸೆಕ್ಷನ್ 144ನ್ನು ನೀವೇ ಜಾರಿ ಮಾಡಿಸಿರಬೇಕು. ಸರ್ಕಲ್ ಇನ್ಸ್‌ಪೆಕ್ಟರನ್ನು ನೀವೇ ಹಾಕಿಸಿಕೊಂಡಿದ್ದೀರಿ. ಕಾಫಿ ಬೋರ್ಡ್ ಮೆಂಬರನ್ನು ನೀವೇ ಮಾಡಿಸಿದ್ದೀರಿ. ಲಲಿತಮ್ಮನವರನ್ನು ಅಧ್ಯಕ್ಷರಾಗಿ ನೀವೇ ಮಾಡಿಸಿದ್ದೀರಿ. 144ನೇ ಸೆಕ್ಷನ್ ಜಾರಿಯನ್ನು ನೀವೇ ಮಾಡಿಸಿದ್ದೀರಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಉತ್ತರ ಆಮೇಲೆ ನಾನು ಹೇಳುತ್ತೇನೆ. ಈಗ ಮಾತನಾಡಲಿ.

ಶ್ರೀ ಎ. ಟಿ. ರಾಮಸ್ವಾಮಿ : ಅಲ್ಲಿ ಏನಾದರೂ ಸಭೆ ನಡೆಸಲಿಕ್ಕೆ ಅಡಚಣೆ ಇದ್ದರೆ, ಸಭೆ ನಡೆಸಲಿಕ್ಕೆ ಯಾರಾದರೂ ಅಡಚಣೆ ಉಂಟುಮಾಡುತ್ತಾರೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರೆ ಒಂದು ನಿಮಿಷ ತಾವು ಯೀಲ್ಡ್ ಆಗಬೇಕು ದಯಮಾಡಿ. ಈ ವಿಚಾರದ ಬಗ್ಗೆ ಮಾತನಾಡುತ್ತಾ ಇದರಲ್ಲಿ ಏನಾದರೂ

ಸಂಶಯ ಇದ್ದರೆ ಸೆಪರೇಟ್ ಆಗಿ ಚರ್ಚೆಗೆ ಇಟ್ಟುಕೊಳ್ಳೋಣ ಎಂದು ಮಾನ್ಯ ರೇವಣ್ಣನವರು ಆಗಲೇ ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಇಟ್ಟುಕೊಳ್ಳುವುದಾದರೆ ಇಟ್ಟುಕೊಳ್ಳಲಿ. ಆದರೆ ಮಾನ್ಯ ರಾಮಸ್ವಾಮಿಯವರು ಏನು ಹೇಳಿದ್ದಾರೆ ಅದಕ್ಕೆ ಸರ್ಕಾರ ಉತ್ತರ ಕೊಡದೆ ಇರುವುದಕ್ಕಾಗುವುದಿಲ್ಲ. ತಾವು ಉತ್ತರ ಕೊಡಲೇ ಬೇಕಾಗುತ್ತದೆ.

(ಗೊಂದಲ)

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ನೀರಾವರಿ ಸಲಹಾ ಸಮಿತಿ ಸಭೆ ಬಗ್ಗೆ ಹೇಳಿದರು. ಮಾನ್ಯ ಶಿವಣ್ಣನವರು ಸಹ ಆ ಸಭೆಯಲ್ಲಿ ಇದ್ದರು. ಮೊನ್ನೆ ಆಗಸ್ಟ್ ತಿಂಗಳಲ್ಲಿ ಮತ್ತೊಂದು ಸಭೆ ನಡೆಯಿತು. ಹೇಮಾವತಿ ಬಲ ಮೇಲ್ದಂಡೆ ನಾಲೆಯಲ್ಲಿ 2,892 ಅಡಿ ಲೆವೆಲ್‌ಗೆ ನೀರು ಬಂದಾಗ ನೀರು ಬಿಡಬೇಕೆಂದು ಹೇಳಿ ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿ ನಿರ್ಣಯ ಆಗಿತ್ತು. ಆ 2,892 ಅಡಿ ಲೆವೆಲ್‌ಗೆ 10ನೇ ತಾರೀಖಿನಂದೇ ನೀರು ರೀಚ್ ಆಗಿತ್ತು. ಅವರು 10ನೇ ತಾರೀಖಿನಂದು ನೀರು ಬಿಡಲಿಲ್ಲ. ಬೇಕಾದರೆ ನಾನು ಹೇಳಿರುವುದು ತಪ್ಪು ಎಂದು ಕಂಡುಬಂದರೆ ತಾವು ಕಡತ ತೆಗೆಸಿ ನೋಡಬಹುದು. ಇದರ ಬಗ್ಗೆ ರೆಸಲ್ಯೂಷನ್ ಆಗಿದೆ. 25ನೇ ತಾರೀಖಿನವರೆಗೆ ನೀರು ಬಿಡಲಿಲ್ಲ. ಏಕೆ ನೀರು ಬಿಡಲಿಲ್ಲವೆಂದು ಕೇಳಿದರೆ- 'ರೈತರು ನೀರು ಬಿಡಬೇಡಿ ಎಂದು ಬರೆದು ಕೊಟ್ಟಿದ್ದಾರೆ' ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ ಶಿವಣ್ಣನವರು ಆ ಸಭೆಯಲ್ಲಿ ಇದ್ದರು. ಬೇಕಾದರೆ ತಾವೆಲ್ಲ ಅವರನ್ನು ಕೇಳಿ ನೋಡಬಹುದು. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ರೇವಣ್ಣನವರು ಆ ಸಭೆಗೆ ಬಂದಿರಲಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ನಾನು ಆ ಸಭೆಗೆ ಬಂದಿರಲಿಲ್ಲ.

ಶ್ರೀ ಎ. ಟಿ. ರಾಮಸ್ವಾಮಿ : ಇದನ್ನು ನಿಜವಾದ ರೈತರು ಬರೆದುಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ. ಯಾರು ಕಂಟ್ರಾಕ್ಟರುಗಳು ಇದ್ದರು, ಇದು ಮಾನ್ಯ ನಾಗೇಗೌಡರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಅವರು ಚೆನ್ನಾಗಿ ಕೆಲಸ ಮಾಡಿಸಿದ್ದಾರೆ, ಅವರು ಕೆಲಸ ಮಾಡಿಸಿಕೊಂಡು ಹೋಗಬೇಕು. ಅವರು ಎಡಗೈ ಬಲಗೈ ಹೆಬ್ಬೆಟ್ಟು ಒತ್ತಿಬಿಟ್ಟು ಯಾರಾದರೂ ರೈತರು ನೀರು ಬಿಡಬೇಡಿ ಎಂದು ಹೇಳುತ್ತಾರೆಯೇ ಕೇಳಿನೋಡಿ. ಕಂಟ್ರಾಕ್ಟರುಗಳ ಏಜೆಂಟ್‌ರಾಗಿ ಕೆಲಸ ಮಾಡುವವರು ಇವರು. ಅನಂತರ ರಾಮಸ್ವಾಮಿ ಹೋಗಿ ಈ ತರಹ ಗಲಾಟೆ ಮಾಡಿದ ಎಂದು ಹೇಳುವವರು ಇವರು. 10ನೇ ತಾರೀಖು ಆ ಲೆವೆಲ್ ನೀರು ಬಂದಿದ್ದರೂ ಸಹ 25ನೇ ತಾರೀಖು ಆದರೂ ಕೂಡ ನೀರು ಬಿಟ್ಟಿಲ್ಲ. ನೀರು ಬಿಟ್ಟಿರದೆ ಇರುವುದರಿಂದ ಬಡ ರೈತರು ಭತ್ತದ ಪಾತಿಗಳಿಗೆ ನೀರನ್ನು ಹೊತ್ತು ಹುಯ್ದಿದ್ದಾರೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಈ ನೈಜತೆಯನ್ನು ಮುಚ್ಚಿಟ್ಟುಕೊಂಡು ಕಂಟ್ರಾಕ್ಟರುಗಳ ಏಜೆಂಟ್‌ರಾಗಿ ಕೆಲಸ ಮಾಡಲಿಕ್ಕೆ ಬಂದವರು ಈ ಮಾತನ್ನು ಹೇಳಿದರೆ ನಾನು ಒಪ್ಪಿಕೊಂಡು ಹೋಗಬೇಕೇ? ಇದು ನಿಜವಾಗಿಯೂ ಕೂಡ ಸೂಕ್ತವಾದ ಮಾತು ಅಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಏಕೆಂದರೆ ನೀರಾವರಿ ಸಲಹಾ

ಸಮಿತಿಯ ಬಗ್ಗೆ ಕಡತದಲ್ಲಿ ಇದೆ. ಅದನ್ನು ತೆಗೆಸಿ ನೋಡಿ. ಅಧಿಕಾರಿಗಳನ್ನು ಕರೆಯಿಸಿ ವಿಚಾರ ಮಾಡಿ. ಸದನದ ಸಮಿತಿ ಮಾಡಿ. ಏನಾದರೂ ನಾನು ಕುತಂತ್ರ ರಾಜಕಾರಣ ಮಾಡುತ್ತಿದ್ದಾರೆ ಒಂದು ನಿಮಿಷವೂ ನಾನು ಈ ಸದನದಲ್ಲಿ ಇರುವುದಿಲ್ಲ. ನಾವು ಏನು ನುಡಿಯುತ್ತೇವೆ, ನುಡಿದಂತೆ ನಡೆದುಕೊಂಡು ಬರುತ್ತೇವೆ. ನಮ್ಮ ಶರೀರದಲ್ಲಿ ಇರತಕ್ಕಂಥದ್ದು ಶುದ್ಧವಾದ ರಕ್ತ, ಪಾಪದ ರಕ್ತ ಈ ಶರೀರದಲ್ಲಿ ಇಲ್ಲ ಎಂದು ನಾನು ಒಂದು ಸಲ ಈ ಸದನದಲ್ಲಿ ಹೇಳಿದ್ದೆ. ಈ ತರಹ ರಾಜಕೀಯ ಮಾಡುತ್ತಾರೆಂದು ಲಘುವಾಗಿ ಅವರು ನಮ್ಮ ಬಗ್ಗೆ ಮಾತನಾಡುವುದನ್ನು ಬಿಡಬೇಕು. ರೈತರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬರುತ್ತಾರೆ ರೈತರಿಗೆ ನೀರು ಕೊಡದೆಯೇ ಕಂಟ್ರಾಕ್ಟರಿಗೆ ಅನುಕೂಲವಾಗಲಿ ಎಂದು ಹೇಳಿ ನೀರು ಬಿಡುವುದನ್ನು ನಿಲ್ಲಿಸುತ್ತಾರೆ. ಮಾನ್ಯ ಶಿವಣ್ಣನವರೇ ನೀವು ಅವತ್ತು ಇರಲಿಲ್ಲವೇ? ಇದರ ಬಗ್ಗೆ ಪ್ರಸ್ತಾಪ ಆ ದಿನ ಮಾಡಿರಲಿಲ್ಲವೇ? ಅಧಿಕಾರಿಗಳು ಇದರ ಬಗ್ಗೆ ಒಪ್ಪಿಕೊಳ್ಳಲಿಲ್ಲವೇ? ಈ ಮಾತನ್ನು ಹೇಳಿದರೆ ನಾವು ಕೇಳಿಕೊಂಡು ಹೋಗಬೇಕೇ? ಇನ್ನೊಂದು, ಕುಡಿಯುವ ನೀರಿನ ಬಗ್ಗೆ ಹೇಳಿದರು. ಕುಡಿಯುವ ನೀರಿಗೆ ಮಂಜೂರಾತಿ ಆಗಿತ್ತು,4 ವರ್ಷದ ಹಿಂದೆಯೇ ಹಳೆಯ ಪೈಪುಗಳನ್ನು ತಂದು ಹಾಕಿದ್ದರೆಂದು ಹೇಳಿದರು. ಆ ಪೈಪುಗಳನ್ನು ನಾನು ತಂದು ಹಾಕಲಿಲ್ಲ. ಆ ಪೈಪುಗಳನ್ನು ತಂದು ಹಾಕಿದವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಶೂಲಕ್ಕೆ ಹಾಕಿ. ಅಲ್ಲಿ ಪೈಪು ತಂದು ಹಾಕಿ 4 ವರ್ಷ ಆಗಿದ್ದರೆ, ನಿಮ್ಮ ಸರ್ಕಾರ ಬಂದು ಎರಡೂವರೆ ವರ್ಷ ಆಗಿದ್ದರೂ ಕುಡಿಯುವ ನೀರಿನ ವ್ಯವಸ್ಥೆ ಅಲ್ಲಿ ಮಾಡುತ್ತೇವೆಂದು ಹೇಳಿಕೊಡೇ ಬಂದಿರಿ. ಆ ಜನ ಹೇಮಾವತಿ ನದಿಯ ದಂಡೆಯ ಪಕ್ಕದಲ್ಲಿ ಇದ್ದರೂ ಕೂಡ ನೀರು ಕುಡಿಯಲಿಕ್ಕೆ ಆಗಲಿಲ್ಲ. ಆ ತರಹ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡಲಿಕ್ಕೆ ನೀವು ಹೋಗಬೇಡಿ. ಹಾಸನ ಜಿಲ್ಲೆಯಲ್ಲಿ ಏನೇನು ನಡೆಯುತ್ತಿದೆ, ವಂಶಾಡಳಿತದ ಬೇಗುದಿ ಅಲ್ಲಿ ನಡೆಯುತ್ತಿದೆಯೇ? ಅದರಿಂದ ಅಲ್ಲಿಯ ಜನ ಬೇಯುತ್ತಿದ್ದಾರೆಯೋ ಅಥವಾ ಇಲ್ಲವೋ? ಅಥವಾ ಪ್ರಜಾಪ್ರಭುತ್ವದ ಆಳ್ವಿಕೆ ಅಲ್ಲಿ ಇದೆಯೇ? ಏನಾಗುತ್ತಿದೆ ಎಂಬುದನ್ನು ತಿಳಿಯಲು ಸದನಸಮಿತಿ ಮಾಡಿ ಯಾರು ತಪ್ಪು ಮಾಡುತ್ತಿದ್ದಾರೋ ಅವರಿಗೆ ಶಿಕ್ಷೆ ಕೊಡಿ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆದರೂ ಕೂಡ ಅದನ್ನು ಸ್ವಾಗತ ಮಾಡಲಿ. ಎಷ್ಟು ನಯವಾಗಿ ಮಾತನಾಡುತ್ತಾರೋ ಅಷ್ಟೇ ನೀತಿಯಿಂದ ಆಡಳಿತ ನಡೆಸಿದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ದಯಮಾಡಿ ಈ ತರಹ ತಪ್ಪು ಉತ್ತರವನ್ನು ಕೊಡಬೇಡಿ ಎಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ನನಗೆ ಒಂದು ಅವಕಾಶವನ್ನು ಕೊಡಬೇಕು ಏಕೆಂದರೆ ನನ್ನ ಬಗ್ಗೆ ಸಭೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆ ನಾನು ಉತ್ತರವನ್ನು ಕೊಡದೇ ಹೋದರೆ ಸಭೆಯಲ್ಲಿ ಒಪ್ಪಿಗೆಯನ್ನು ಕೊಟ್ಟ ಹಾಗೆ ಆಗುತ್ತದೆ. ಅವರು ಹೇಳಿದ ಮೇಲೆ ನಾವು ಉತ್ತರವನ್ನು ಹೇಳಬೇಡವೇ? ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದ ಕೂಡಲೇ ಏನು ಎದ್ದು ನಿಂತುಕೊಂಡರೆ ಏನು ಎಲ್ಲರೂ ಮಾತನಾಡುತ್ತೀರಾ ಎಂದರೆ, ನನ್ನ ಹೆಸರು ಹಿಡಿದು ಹೇಳಿದ ಮೇಲೆ ನಾನು ಕನಿಷ್ಟ ಹೇಳಿಕೊಳ್ಳದೇ ಹೋದರೆ, ಸದನ ಸಮಿತಿಯನ್ನು ಮಾಡಿ ಮಾತಿಗೂ ಕೃತಿಗೂ ಎಷ್ಟು ವ್ಯತ್ಯಾಸ ಇದೆ ಎನ್ನತಕ್ಕಂಥದ್ದು ಗೊತ್ತಾಗಲಿ ಎನ್ನುವುದೇ, ಮಾನ್ಯ ಮುಖ್ಯ ಮಂತ್ರಿಗಳ ಎದುರುಗಡೆಯಲ್ಲಿ ಕೇಳಲಿಕ್ಕೆ ತಯಾರು

ಇದ್ದೇವೆ. ಸರ್ವಾಧಿಕಾರ ಇದೆಯಾ? ಪ್ರಜಾಪ್ರಭುತ್ವ ಇಲ್ವಾ? ಕಾನೂನು ಕುಸಿದಿದೆ ಎಂದು ಹೇಳುತ್ತಾರೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಂಘದ ಸಭೆಗಳಿಗೆ ಎಷ್ಟು ಪೋಲೀಸ್ ಅಧಿಕಾರಿಗಳನ್ನು ಹೊರಗಡೆಯಿಂದ ಅಥವಾ ಜಿಲ್ಲೆಗಳಿಂದ ಒಂದು ಕಡೆ ಸೇರಿಸುವಂಥದ್ದು ಆಗಿದೆ, ಎನ್ನತಕ್ಕಂಥ ಒಂದು ವಿಚಾರವನ್ನು ವಿಚಾರಣೆ ಮಾಡಿ. ಹಿಂದಿನ 5 ವರ್ಷದ್ದು ಸಹ ನೋಡಲಿ. ಎಲ್ಲಿಯಾದರೂ ಚುನಾವಣೆ, ಸಭೆಗಳು, ಎಲ್ಲಿಯಾದರೂ ಒಂದು ಊರಿನಲ್ಲಿ ಒಂದು ಸೊಸೈಟಿ ಎಲೆಕ್ಷನ್ ನಡೆದರೆ 144 ಸೆಕ್ಷನ್, ಮಹಿಳಾ ಸಭೆ ಎಂದರೆ 144 ಸೆಕ್ಷನ್, ಅಂದರೆ ಹೇಗೆ? ರಾಮಕೃಷ್ಣ ಹೆಗಡೆಯವರ ಸಭೆ ನಡೆದಾಗ ಎಷ್ಟು ಗಲಾಟೆಯು ನಡೆಯಿತು. ಅವರು ಏನು ಕಾನೂನು ಇದೆಯಾ, ಇಲ್ಲವಾ ಎಂದು ಹೇಳಿದರಲ್ಲಾ ಅದಕ್ಕೆ ಒಂದು ವಿಚಾರಣೆ ನಡೆಯಲಿ ಎಷ್ಟು ಪೋಲೀಸ್ ಅಧಿಕಾರಿಗಳು ಹೊರಗಡೆಯಿಂದ ಬಂದಿದ್ದರು ಜಿಲ್ಲೆಯ ಎಲ್ಲಾ ಕಡೆಯಿಂದ ಬಂದಿದ್ದರು ಎಂದು ಆಮೇಲೆ ಗೊತ್ತಾಗುತ್ತದೆ. ಪಾಪದ ಕೆಲಸ ಅಲ್ಲಿ ಏನೂ ಆಗಿಲ್ಲ ಯಾರ ಕೈ ಕಾಲು ತೆಗೆಸಿಲ್ಲ, ಆಮೇಲೆ ಯಾರ್‍ಯಾರು ಎಲ್ಲೆಲ್ಲಿ ಕೈಕಾಲು ತೆಗೆಸಿದ್ದಾರೆಂದು ಹೇಳಬೇಕಾಗುತ್ತದೆ. ಸುಮ್ಮನೆ ನೇರವಾಗಿ ಸಾರಸಗಟಾಗಿ ಹೇಳಿಬಿಟ್ಟರೆ ಸರಿಯಲ್ಲ ಈ ರೀತಿಯಾಗಿ ಒಬ್ಬರ ಮೇಲೆ ಆರೋಪವನ್ನು ಮಾಡುವುದು ಸರಿಯಾದುದು ಅಲ್ಲ. ಹಿಂದಿನ ಐದು ವರ್ಷದ್ದು ವಿಚಾರಣೆ ನಡೆಯಲಿ, ಈಗಿನ ಎರಡೂವರೆ ವರ್ಷದ್ದು ನಡೆಯಲಿ. ಆಮೇಲೆ ಗಂಡಿಸಿಗೆ ಎಂಎಸ್‌ಎಸ್ ಮಾಡುವಾಗ, ಅರಕಲಗೂಡಿಗೆ ಎಂಎಸ್‌ಎಸ್ ಮಾಡುವುದಕ್ಕೆ ನಾವೇನು ಅಡ್ಡ ಬರಲಿಲ್ಲ. ಎಂದರೆ ಬೆರೆಯಕ್ಕೆ ಅಡ್ಡ ಬಂದಿದ್ದೇವೆಂದು ಅರ್ಥವೇ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಶ್ರೀ ಹೆಚ್.ಸಿ. ಶ್ರೀಕಂಠಯ್ಯನವರು ನನಗೆ ಫೋನ್ ಮಾಡಿದ್ದರು, ಮಹಿಳಾ ಕೋ-ಆಪರೇಟಿವ್ ಬ್ಯಾಂಕಿಗೆ ಎಲೆಕ್ಷನ್ ಇದೆ, ಜನರಲ್ ಬಾಡಿ ಮೀಟಿಂಗ್ ಇದೆ. ಅಲ್ಲ 144 ಸೆಕ್ಷನ್ ಜಾರಿಗೆ ತಂದಿದ್ದಾರೆ ಅಲ್ಲಿ ಎಲೆಕ್ಷನ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿದರು. ನಾನು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ, ಎಸ್.ಪಿ.ಯ ಜೊತೆಯಲ್ಲಿ ಮಾತನಾಡಿದೆ. ಅವರು ಹೇಳಿದರು ಎಲೆಕ್ಷನ್ ಮಾಡುವವರು ನಾವು ಅಲ್ಲ. ಕೋ-ಆಪರೇಟೀವ್ ರಿಜಿಸ್ಟ್ರಾರ್‌ರೋ, ಜಾಯಿಂಟ್ ರಿಜಿಸ್ಟ್ರಾರ್‌ರೋ ಮಾಡಬೇಕು. ಅವರು ಕಾನೂನಿನ ಪ್ರಕಾರವಾಗಿ ಈ ಎಲೆಕ್ಷನ್ ಮಾಡುವುದಕ್ಕೆ ಬರುವುದಿಲ್ಲ. ಒಟ್ಟು ಸದಸ್ಯರು ನೋಂದಾಯಿಸಿಕೊಂಡಿದ್ದಾರೋ ಅವರಲ್ಲಿ ಕೆಲವರಿಗೆ ನೋಟೀಸ್ ಹೋಗಿದೆ, ಇನ್ನು ಕೆಲವರಿಗೆ ನೋಟೀಸ್ ಹೋಗಿಲ್ಲ. ನೋಟೀಸ್ ಹೋಗದೇ ಇರತಕ್ಕಂತಹ ಸದಸ್ಯರುಗಳು ಬಂದು ನನಗೆ ಕಂಪ್ಲೇಂಟ್ ಕೊಟ್ಟರು. ಅದಕ್ಕೋಸ್ಕರವಾಗಿ ಕಾನೂನು ಬಾಹಿರವಾಗುತ್ತದೆಂದು ಚುನಾವಣೆಯನ್ನು ನಿಲ್ಲಿಸಿ ಎಂದು ನಾನು ಬರೆದಿದ್ದೇನೆ ರಾಮಸ್ವಾಮಿಯವರೆ. This is what has come to my knowledge. ಅದಕ್ಕೆ ಅವರು ಏನು ಹೇಳಿದರು ಎಂದರೆ ಈಗ ನಾವು ಶುರು ಮಾಡುವುದಕ್ಕೆ ಹೋದರೆ ನೋಂದಾಯಿಸಿಕೊಂಡವರಲ್ಲಿ ಇನ್ವಿಟೇಶನ್ ಇರುವವರು ಬರುತ್ತಾರೆ ಇನ್ವಿಟೇಶನ್ ಇಲ್ಲದೇ ಇರುವಂಥವರು ಮತ ಹಾಕುವುದಕ್ಕೆ ಬರುತ್ತಾರೆ. ಅನಾವಶ್ಯಕವಾಗಿ ಕಾನೂನು ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಬರಬಹುದೆಂದು ನಾನು 144ನೇ ಸೆಕ್ಷನ್ ಜಾರಿಮಾಡಿದ್ದೇವೆ ಎಂದು ಹೇಳಿದ ಮೇಲೆ ಆಗಲಿ ನೀವು ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಂಡು ಬನ್ನಿ ಉಳಿದಿದ್ದು ಆ ಸೊಸೈಟಿಯ ಕಾನೂನಿನ

ಅನ್ವಯ ಯಾವ ರೀತಿ ಏನು ಎನ್ನುವುದನ್ನು ವಿಚಾರ ಮಾಡೋಣ. ಕಾನೂನು ಪ್ರಕಾರ ಸೊಸೈಟಿ ಚುನಾವಣೆ ನಡೆಯಬೇಕು ಎಂದರೆ ಮತ್ತೆ ನೋಟೀಸ್ ಇಶ್ಯೂ ಮಾಡಿಸಿ ಯಾರು ಗೆದ್ದುಕೊಳ್ಳುತ್ತಾರೋ ಗೆದ್ದುಕೊಳ್ಳಲಿ ಅದಕ್ಕೆ ನೀವು ಯಾರು ಇಂಟರೆಸ್ಟೆಡ್ ಇಲ್ಲ, ನಾವು ಯಾರು ಇಂಟರೆಸ್ಟೇಡ್ ಇಲ್ಲ. So it should not become a law and order problem. ಎಂದು ಅವರು ಹೇಳಿದ್ದರಿಂದ ನಾನು ಅನುಮತಿಯನ್ನು ಕೊಟ್ಟೆ. ಇದರಲ್ಲಿ ರೇವಣ್ಣನದ್ದು ಇಲ್ಲ. ನಾನು ಎಸ್.ಎಸ್. ಪಾಟೀಲರನ್ನು ಸಹ ಕೇಳಲಿಲ್ಲ. This is all what has happened.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದು ಬಹಳ ಲೇಟೆಸ್ಟ್, ತಾವು ಮಾಡಿದ್ದು ಅಲ್ಲಿ ಹೆಣ್ಣು ಮಕ್ಕಳು ಧರಣಿ ಮಾಡುತ್ತಿದ್ದಾರೆ ಇವತ್ತು ಅಲ್ಲಿ ಜನರಲ್ ಬಾಡಿ ಮೀಟಿಂಗ್ ಇತ್ತು, 144ನೇ ಸೆಕ್ಷನ್ ಜಾರಿ ಮಾಡಿದ್ದಾರೆಂದು ತಮಗೆ ಫೋನ್ ಮಾಡಿದ ಮೇಲೆ ತಾವು ತೆಗೆದುಕೊಂಡಂತಹ ಕ್ರಮದ ಬಗ್ಗೆ ಹೇಳಿದ್ದೀರಿ. ಅದಕ್ಕಿಂತಲೂ ಮುಂಚೆ ಏನು ನಡೆಯಿತು ಎಂದರೆ ಅಲ್ಲಿ ಜನರಲ್ ಬಾಡಿ ಆಗಬೇಕೆಂದು ಹೇಳಿದರು ಆಗ ಅಲ್ಲಿ ಏನು ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಇರಲಿಲ್ಲ. ಅಲ್ಲಿ ಏನಾಗಿದೆ ಎಂದರೆ ಇವರು ಮೆಂಬರ್ ಜಾಸ್ತಿ ಇದ್ದಾರೆಂದು ಯಾರು ಹೇಮಾವತಿ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ಪ್ರಮೋಟರ್ಸ್ ಇದ್ದರು, ಅವರು ಸದಸ್ಯರುಗಳು ಜಾಸ್ತಿ ಇದ್ದರೆ ಅವರು ಕಮಿಟಿಯನ್ನು ಮಾಡಿಕೊಂಡರೆ ಇವರ ಕಮಿಟಿಯಾಗುತ್ತದೆ ಎಂದುಕೊಂಡೇ ಅವರು 144ನೇ ಸೆಕ್ಷನ್ ಜಾರಿ ಮಾಡಿ, ನೋಟೀಸ್ ಕೊಟ್ಟಿದ್ದಾರೆ. ನೋಟೀಸ್ ಕೊಟ್ಟಿಲ್ಲವೆಂದು ಯಾರು ಹೇಳುತ್ತಾರೆಂದರೆ,

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತಹ ವರದಿ ಬಹಳ ಪ್ರಾಮಾಣಿಕವಾದಂತಹ ವರದಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ನೋಟೀಸ್ ಕೊಡದೇ ಇದ್ದರೆ ಜಾಯಿಂಟ್ ಡೈರೆಕ್ಟರ್ ಇದು ಸರಿ ಇಲ್ಲ ಎಂದು ತಳ್ಳಿ ಹಾಕಬಹುದಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ಜನರಲ್ ಬಾಡಿ ಇಲ್ಲೀಗಲ್ ಇದ್ದರೆ ಬೇರೆ ಮಾಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಜೆ. ಹೆಚ್. ಪಾಟೇಲ್ : ಮಾನ್ಯ ಅಧ್ಯಕ್ಷರೇ, ಅದು ಪ್ರಜಾತಾಂತ್ರಿಕವಾಗಿ, ಎಲ್ಲ ನೋಂದಾಯಿಸಿದ ಸದಸ್ಯರಿಗೆ ನೋಟೀಸ್ ಕೊಟ್ಟು, ದಿನಾಂಕವನ್ನು ಫಿಕ್ಸ್ ಮಾಡಿದ್ದರೆ, ಮಾನ್ಯ ಅಧ್ಯಕ್ಷರೆ, ಚುನಾವಣೆಯನ್ನು ಮಾಡುವುದಕ್ಕೆ ಎಂದಿಗೂ ಸಹ ಹಿಂಜರಿಯುವುದಿಲ್ಲ. ಯಾರಾದರೂ ಗೆದ್ದುಕೊಳ್ಳಲಿ. ಈಗಲೂ ಅವಕಾಶ ಇದೆ. ಆದರೆ, ಇಲ್ಲದ ರಾಜಕೀಯ ಬೆರಸುವುದಕ್ಕೆ ಯಾರು ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ರಾಜಕೀಯವನ್ನು ಮಾಡುವುದಿಲ್ಲ. ರಾಜಕೀಯವನ್ನು ಮಾಡುವುದಾದರೆ ಅಲ್ಲಿಗೆ ಹೋಗಬಹುದಾಗಿತ್ತು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ನನಗೆ ಹೆಚ್.ಸಿ. ಶ್ರೀಕಂಠಯ್ಯನವರು ಫೋನ್ ಮಾಡಿದ್ದು ಏಕೆ ಎಂದರೆ ನನ್ನ ಮೇಲೆ ವಿಶ್ವಾಸ ಇರುವುದರಿಂದ. ಆಫೀಸರ್‌ನ್ನು ಕೇಳಿ ಆಗಲೇ ಹೇಳಿದೆ, ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅಲ್ಲಿ ಏನಾಗಿದೆ ಎಂದರೆ 400 ಜನ ತರಾತುರಿಯಲ್ಲಿ ಮೆಂಬರ್‌ಶಿಪ್ ಮಾಡಿಸಿ ಅದೇ ದಿವಸ ಮಾಡಿಸಿ, ಅದಕ್ಕೆ ಹೈಕೋರ್ಟ್ ಸ್ಟೇ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಅದು ಏನೇ ಇರಲಿ, ಕಾನೂನಿನ ಪ್ರಕಾರ ಚುನಾವಣೆಯನ್ನು ನಡೆಸುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಇನ್ನೇನು ತೊಂದರೆ, ಚುನಾವಣೆಯನ್ನು ಮಾಡಿಸುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ : ಅಲ್ಲಿಗೆ, ಅವರು ಯಾವ ಉದ್ದೇಶದಿಂದ ಮಾಡಿದ್ದರು ಅದು ಸಫಲವಾಯಿತು. ಅವತ್ತಿನ ದಿವಸ ಜನರಲ್ ಬಾಡಿ ಆಗಬಾರದಿತ್ತು ಅದನ್ನು ತಪ್ಪಿಸಿದರು. ಈಗ ಮಾಡುತ್ತೇವೆಂದು ಹೇಳಿದರು ಸರಿಯಾಯಿತು. ಅವರಿಗೆ ಆಗಬೇಕಾಗಿದ್ದಂತಹ ಕೆಲಸ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 400 ಮೆಂಬರ್‌ನ್ನು ಬೆನಾಮಿ ಮಾಡಿಸಿ ಅದರೊಳಗೆ ಸೇರಬೇಕೆಂದು ಇದ್ದದ್ದು ಸಾಧಿಸಿದಂತೆ ಆಯಿತು. ಆ ದಿವಸ ಅವರದ್ದು ಪೋಸ್ಟ್‌ಪೋನ್ ಮಾಡಬೇಕು ಎನ್ನುವುದು ಅವರ ದೃಷ್ಟಿ. ತಮ್ಮಿಂದ ಸ್ಟೇ ಹೋದ ಮೇಲೆ ಇನ್ನಷ್ಟು ಕನ್‌ಫರ್ಮ್ ಆಯಿತು. ನ್ಯಾಯವಾಗಿ ನಡೆದುಕೊಂಡವರಿಗೆ ನ್ಯಾಯ ಸಿಗಲಿಲ್ಲ. ಅನ್ಯಾಯವಾಗಿ ಮೆಂಬರ್ಸ್ ಸೇರಬೇಕೆಂದಿದ್ದರೋ ಅವರದ್ದು ಹೋಯಿತು.

ಶ್ರೀ ಎಸ್. ಎಸ್. ಪಾಟೀಲ್ : ಅದು ಹಾಗಾಗಿಲ್ಲ. ಸೊಸೈಟಿ ರಿಜಿಸ್ಟರ್ ಆಗುವಾಗ ಎಷ್ಟು ಜನರನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದರೋ ಅವರನ್ನು ಮಾತ್ರ ಸೇರಿಸುತ್ತೇವೆ. ಉಳಿದವರನ್ನು ಸೇರಿಸುವ ಪ್ರಶ್ನೆಯೇ ಇಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"